ಆದಿಜಗದ್ಗುರು ಶ್ರೀ ಶಿವರಾತ್ರೀಶ್ವರ ಶಿವಯೋಗಿಗಳವರ ಜಾತ್ರಾ ಮಹೋತ್ಸವ

# ಸುತ್ತೂರು ವಾರ್ತೆ

ಖಾಸಗಿ ಪ್ರಸಾರ ಸಂಪುಟ : 13 ಸಂಚಿಕೆ : 6 ಪುಟ 8 | ಸುತ್ತೂರು ಶ್ರೀಕ್ಷೇತ್ರ | ಬುಧವಾರ, 6 ಫೆಬ್ರವರಿ 2019

## ಕುಸ್ತಿ ಅಖಾಡ; ಸರಿದ ಕಾರ್ಮೋಡ

ಜಾತ್ರಾ ಮಹೋತ್ಸವದ ಅಂಗವಾಗಿ ಮಂಗಳವಾರ ಮಧ್ಯಾಹ್ನ ಆಯೋಜನೆಗೊಂಡಿದ್ದ ಕುಸ್ತಿ ಪಂದ್ಯಾವಳಿಯ ಉದ್ಘಾಟನಾ ಸಮಾರಂಭಕ್ಕೆ ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳವರ ದಿವ್ಯ ಸಾನ್ನಿಧ್ಯದಲ್ಲಿ ಚಾಲನೆ ನೀಡಲು ಮಠಾಧೀಶರು, ಮುಖ್ಯ ಅತಿಥಿಗಳು, ತೀರ್ಪುಗಾರರು, ಕುಸ್ತಿಪಟುಗಳು ಅಖಾಡದಲ್ಲಿ ನೆರೆದಿದ್ದರು. ನೈಟ್ರೋಜನ್ ತುಂಬಿದ ಬಣ್ಣ ಬಣ್ಣದ ನೂರಾರು ಬಲೂನುಗಳು ಗಗನಮುಖಿಯಾಗಿದ್ದವು. ಆ ಕ್ಷಣದಲ್ಲಿ ಕ್ರೀಡಾ ಜ್ಯೋತಿಯ ಕಾವು ಬಲೂನುಗಳಿಗೆ ತಾಕಿ, ಕ್ಷಣ ಮಾತ್ರದಲ್ಲಿ ಛಿದ್ರ ಛಿದ್ರವಾಗಿ ಅಖಾಡದಲ್ಲೆಲ್ಲಾ ತುಂಬಿಕೊಂಡವು. ನೆರೆದಿದ್ದವರಿಗೆಲ್ಲಾ ಏನೋ ಆಗಿ ಹೋಯಿತು ಎಂಬ ಆತಂಕ ಆವರಿಸಿತು. ಕ್ಷಣಾರ್ಧದಲ್ಲಿ ಟಿವಿಗಳಲ್ಲಿ ಈ ಸುದ್ದಿ ಬ್ರೇಕಿಂಗ್ ನ್ಯೂಸ್ ಆಗಿ ಹೋಯಿತು. ಪರಿಣಾಮ ಎಲ್ಲರೂ ಗಾಬರಿಗೊಂಡರು.

ಆದರೆ, ಕ್ಷೇತ್ರಾಧಿಪತಿ ಆದಿ ಜಗದ್ಗುರುಗಳ ಮಹಿಮೆ, ಸುತ್ತೂರು ಶ್ರೀಗುರು ಪರಂಪರೆಯ ತಪೋಬಲದ ಫಲದಿಂದಾಗಿ ಯಾರಿಗೂ ಏನು ತೊಂದರೆಯಾಗಲಿಲ್ಲ. ಪರಮಪೂಜ್ಯ ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳವರೇ ಮಾಧ್ಯಮ ಬಂಧುಗಳೊಂದಿಗೆ ಘಟನೆಯ ಬಗ್ಗೆ ಮಾಹಿತಿ ನೀಡಿದರು. ಮುಖ್ಯಮಂತ್ರಿಗಳು ಸೇರಿದಂತೆ ಅನೇಕರು ತಕ್ಷಣವೇ ಶ್ರೀಗಳವರೊಂದಿಗೆ ದೂರವಾಣಿಯಲ್ಲಿ ಪೂಜ್ಯರ ಕ್ಷೇಮದ ಬಗ್ಗೆ ವಿಚಾರಿಸಿದರು. ಘಟನೆಯಲ್ಲಿ ಕೆಲವರಿಗೆ ಸಣ್ಣಪುಟ್ಟ ಗಾಯಗಳಾಗಿದ್ದು ಯಾರೂ ಆತಂಕ ಪಡುವ ಅವಶ್ಯಕತೆ ಇಲ್ಲ ಇದನ್ನು ಮಾಧ್ಯಮದವರಿಗೆಲ್ಲಾ ತಿಳಿಸಿ ಎಂದು ಪೂಜ್ಯರು ಹೇಳಿದರು. ಒಟ್ಟಿನಲ್ಲಿ ಕುಸ್ತಿ ಅಖಾಡದಲ್ಲಿ ಒಂದೆರಡು ಕ್ಷಣ ಆವರಿಸಿದ್ದ ಕಾರ್ಮೋಡ ಸರಿಯುವ ಮೂಲಕ ಮುಂದಿನ ಕಾರ್ಯಕ್ರಮಗಳೆಲ್ಲಾ ನಿರಾತಂಕವಾಗಿ ನೆರವೇರಿದವು.



ಮಂಗಳವಾರ ರಾತ್ರಿ ಕಪಿಲಾ ತೀರದಲ್ಲಿ ಆದಿಜಗದ್ಗುರುಗಳ ಮೂರ್ತಿಗೆ ಮಹಾ ಮಂಗಳಾರತಿ ನೆರವೇರಿಸುವ ಮೂಲಕ ಪರಮಪೂಜ್ಯ ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳವರು ತೆಪ್ಪೋತ್ಸವಕ್ಕೆ ಚಾಲನೆ ನೀಡಿದರು.

## ಕೃಷಿ ಮತ್ತು ಶಿಕ್ಷಣ ಕ್ಷೇತ್ರಕ್ಕೆ ಶ್ರೀಮಠದ ಕೊಡುಗೆ ಅಪಾರ

### ಡಾ. ಜಿ. ಪರಮೇಶ್ವರ

ಜಾತ್ರಾ ಮಹೋತ್ಸವದ ಭಜನಾ ಮೇಳ ಸಮಾರೋಪ ನುಡಿಗಳನ್ನಾಡಿದ ರಾಜ್ಯದ ಉಪ ಮುಖ್ಯಮಂತ್ರಿಗಳಾದ ಶ್ರೀ ಡಾ. ಜಿ. ಪರಮೇಶ್ವರ ಅವರು ಮಾತನಾಡುತ್ತಾ ಸುತ್ತೂರು ಮಠವು ಕೃಷಿ ಮತ್ತು ಶಿಕ್ಷಣ ಕ್ಷೇತ್ರಕ್ಕೆ ಅಪಾರವಾದ ಕೊಡುಗೆಯನ್ನು ನೀಡಿದೆ. ಶ್ರೀಕ್ಷೇತ್ರದಲ್ಲಿ ನಡೆಯುವ ಕಾರ್ಯಕ್ರಮದಲ್ಲಿ ಭಾಗವಹಿಸುವುದು ಸಂತೋಷದ ವಿಚಾರ. ನಾನು ಅಧಿಕಾರದಲ್ಲಿ ಇಲ್ಲದಿದ್ದಾಗಲೂ ಸುತ್ತೂರು ಜಾತ್ರೆಯಲ್ಲಿ ಭಾಗವಹಿಸಿದ್ದೆ. ಸುತ್ತೂರು ಮಠಕ್ಕೆ ಸಾವಿರ ವರ್ಷಗಳ ಇತಿಹಾಸವಿದ್ದು ಸಾಮಾಜಿಕವಾಗಿ ಮತ್ತು ಧಾರ್ಮಿಕವಾಗಿ ಸೇವೆಯನ್ನು ಮಾಡುತ್ತಾ ಧರ್ಮದ ಪರಂಪರೆಯನ್ನು ಸಾರುತ್ತಿದೆ. ಅಂದಿನಿಂದ ಇಂದಿನವರೆಗೂ ಸಮಾಜಕ್ಕೆ ಉತ್ತಮ ಸಂದೇಶಗಳನ್ನು ನೀಡುತ್ತಾ ಬಂದಿದೆ. ಜೆಎಸ್‌ಎಸ್ ಶಿಕ್ಷಣ ಸಂಸ್ಥೆಯಲ್ಲಿ 50,000ಕ್ಕೂ ಹೆಚ್ಚು ವಿದ್ಯಾರ್ಥಿಗಳು ವ್ಯಾಸಂಗ ಮಾಡುತ್ತಿದ್ದು, ಇಲ್ಲಿ ವ್ಯಾಸಂಗ ಮಾಡಿದ ವಿದ್ಯಾರ್ಥಿಗಳು ವಿಶ್ವದಾದ್ಯಂತ ಉತ್ತಮ ಬದುಕನ್ನು ಕಟ್ಟಿಕೊಂಡಿದ್ದಾರೆ. 1947ರಲ್ಲಿ ನಮ್ಮ ದೇಶದಲ್ಲಿ ಸಾಕ್ಷರತೆ ಶೇ.12% ಇತ್ತು. ಈಗ ಸಾಕ್ಷರತೆಯ ಪ್ರಮಾಣ ಶೇ.78% ರಷ್ಟು ಹೆಚ್ಚಾಗಿದ್ದು, ಇದಕ್ಕೆ ಸರ್ಕಾರ ಮಾತ್ರವಲ್ಲದೇ ದೇಶದಲ್ಲಿರುವ ಶ್ರೀಮಠಗಳ ಸ್ವಾಮೀಜಿಗಳು ಕಾರಣರಾಗಿರುತ್ತಾರೆ ಎಂದು ಹೇಳಿದರು.

2ನೇ ಪುಟಕ್ಕೆ



ಭಜನಾ ಮೇಳ ಸಮಾರೋಪ ಸಮಾರಂಭದಲ್ಲಿ ಉಪ ಮುಖ್ಯಮಂತ್ರಿ ಡಾ. ಜಿ. ಪರಮೇಶ್ವರ ಮಾತನಾಡಿದರು. ಚಿತ್ರದಲ್ಲಿ ಗಾವಡಗೆರೆ, ಜಡೆ ಮಠ, ಆನಂದಪುರಂ ಶ್ರೀಗಳು, ಶ್ರೀ ವಾಸು, ಶ್ರೀ ಕಳಲೆ ಕೇಶವಮೂರ್ತಿ ಮೊದಲಾದವರುಗಳಿದ್ದಾರೆ.

## ಜಾತ್ರೆಯಲ್ಲಿ ತೊಡೆ ತಟ್ಟಿದ ಜಟ್ಟಿಗಳು...



ಕುಸ್ತಿಪಂದ್ಯಾವಳಿಗೆ ಚಾಲನೆ ನೀಡಿದ ಸಂದರ್ಭ

ಜಾತ್ರಾ ಮಹೋತ್ಸವದ ಅಂಗವಾಗಿ ಆಯೋಜಿಸಲಾಗಿದ್ದ 39ನೇ ರಾಷ್ಟ್ರಮಟ್ಟದ ಕುಸ್ತಿ ಪಂದ್ಯಾವಳಿಯು ಮಂಗಳವಾರ ಮಧ್ಯಾಹ್ನ ಚಾಲನೆಗೊಂಡಿತು. ಈ ಪಂದ್ಯಾವಳಿಯಲ್ಲಿ ಒಟ್ಟು 100 ಮಂದಿ ಕುಸ್ತಿಪಟುಗಳು ಅಂದರೆ 50 ಜೋಡಿಗಳು ಭಾಗವಹಿಸಿದ್ದವು. ಈ ಬಾರಿ ಕುಸ್ತಿ ಪಂದ್ಯಾವಳಿಯಲ್ಲಿ ಮೈಸೂರಿನ ಪೈಲ್ವಾನ್ ಚಂದನ್ ಮತ್ತು ಉದ್ಬೂರಿನ ಪೈಲ್ವಾನ್ ಭರತ್ ಅವರ ನಡುವೆ ನಡೆದ ಸೆಣಸಾಟದಲ್ಲಿ ಪೈಲ್ವಾನ್ ಭರತ್‌ರವರು ಮೆಲುಗೈ ಸಾಧಿಸಿದರು. ಆ ಮೂಲಕ ಉದ್ಬೂರು ಹತ್ತುಜನಗಳ ಗರಡಿಯ ಕುವರ 'ಸುತ್ತೂರು ಕುಮಾರ'ನಾಗಿ ಹೊರಹೊಮ್ಮಿದ. ಮಧ್ಯಾಹ್ನ 2.30ಕ್ಕೆ ಅಖಾಡಕ್ಕಿಳಿದ ಪೈಲ್ವಾನರು ವಿವಿಧ ವಿಭಾಗಗಳಲ್ಲಿ ತಮ್ಮ ಶಕ್ತಿ ಮತ್ತು ಯುಕ್ತಿಯನ್ನು ರಾತ್ರಿ 8ರವರೆವಿಗೂ ಪ್ರದರ್ಶಿಸಿ ನೆರೆದಿದ್ದ ಸಹಸ್ರಾರು ಕ್ರೀಡಾಭಿಮಾನಿಗಳ ಮೈನವಿರೇಳಿಸಿದರು.



ಸುತ್ತೂರು ಕುಮಾರನಾದ ಉದ್ಬೂರು ಭರತ್

## ಜಿಮ್‌ನತ್ತ ಯುವಕರ ಚಿತ್ತ...!



ಸುತ್ತೂರು ಜಾತ್ರಾ ಮಹೋತ್ಸವದ ಅಂಗವಾಗಿ ನಡೆದ ಕುಸ್ತಿ ಪಂದ್ಯಾವಳಿ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದ ಶಾಸಕರು ಹಾಗೂ ಮಾಜಿ ಸಚಿವರು ಆದ **ಶ್ರೀ ತನ್ವೀರ್ ಸೇಠ್** ಅವರು ಸುತ್ತೂರು ಜಾತ್ರೆಯು ಕೇವಲ ಧಾರ್ಮಿಕ ಜಾತ್ರೆಯಾಗಿರದೆ ಗ್ರಾಮೀಣ ಜನರ ಯಾತ್ರೆಯಾಗಿದೆ. ಇಲ್ಲಿ ಮಹಿಳೆಯರಿಗೆ ಮತ್ತು ಮಕ್ಕಳಿಗಾಗಿ ರಂಗೋಲಿ ಸ್ಪರ್ಧೆ, ದೇಸಿ ಆಟಗಳನ್ನು ಏರ್ಪಡಿಸಿ ಪ್ರೋತ್ಸಾಹಿಸುವುದರ ಜೊತೆಗೆ ಗ್ರಾಮೀಣ ಭಾಗದ ರೈತರಿಗೆ ಆಧುನಿಕ ಕೃಷಿಯ ಬಗ್ಗೆ ತಿಳುವಳಿಕೆ ಮೂಡಿಸಲು ಕೃಷಿ ಮೇಳವನ್ನು ಆಯೋಜಿಸಿ, ಕೃಷಿಕರಿಗೆ ಉತ್ತಮ ಮಾಹಿತಿ ದೊರೆಯುವಂತೆ ಅನುಕೂಲ ಮಾಡಿ ಕೊಡಲಾಗಿದೆ. ಕುಸ್ತಿಯು ಒಂದು ಗ್ರಾಮೀಣ ಕ್ರೀಡೆಯಾಗಿದ್ದು, ಇಲ್ಲಿ ಗುರುಗಳ ಮತ್ತು ಶಿಷ್ಯನ ನಡುವೆ ಉತ್ತಮ ಬಾಂಧವ್ಯ ಮತ್ತು ಗೌರವವಿರುತ್ತದೆ ಇಲ್ಲಿ ಯಾವುದೇ ರೀತಿಯ ಜಾತಿ ಭೇದವಿರುವುದಿಲ್ಲ. ಹಿಂದಿನ ಕಾಲದಲ್ಲಿ ಮಣ್ಣಿನ ಅಖಾಡದಲ್ಲಿ ಆಡುತ್ತಿದ್ದ ಕುಸ್ತಿಯನ್ನು ಮರೆತು ಇಂದು ಯುವಜನತೆ ಜಿಮ್‌ನ ಕಡೆ ಆಕರ್ಷಿತರಾಗಿದ್ದಾರೆ, ಇಂತಹ ಸಂದರ್ಭದಲ್ಲಿ ಶ್ರೀಗಳು ಕುಸ್ತಿ ಪಂದ್ಯಾವಳಿ ಏರ್ಪಡಿಸಿರುವುದು ಅರ್ಥಪೂರ್ಣವಾಗಿದೆ ಎಂದು ಹೇಳಿದರು. –ಆದರ್ಶ್.ಹೆಚ್.ಆರ್ & ತೇಜ

## ಕುಸ್ತಿ ಅಖಾಡದಲ್ಲಿ ಪಟ್ಟು ಸಡಿಲಿಸದ ಜಟ್ಟಿಗಳು



## ಯುವಜನತೆ ಭಜನಾ ಕಲೆಯತ್ತ ಆಕರ್ಷಿತರಾಗಬೇಕು




ಭಜನಾ ಮೇಳ ಸಮಾರೋಪ ಸಮಾರಂಭದಲ್ಲಿ ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ಮೈಸೂರು ಮಹಾನಗರ ಪಾಲಿಕೆಯ ಮಹಾಪೌರರಾದ **ಶ್ರೀಮತಿ ಪುಷ್ಪಲತಾ ಜಗನ್ನಾಥ್‌ರವರು** ಮಾತನಾಡುತ್ತಾ ನಾಡಿನ ವಿವಿಧ ಕಡೆ ಭಜನಾ ಮೇಳಗಳು ನಡೆಯುತ್ತವೆ. ಆದರೆ ಸುತ್ತೂರು ಶ್ರೀಕ್ಷೇತ್ರದಲ್ಲಿ ನಡೆಯುವ ದೊಡ್ಡಮಟ್ಟದ ಭಜನಾ ಮೇಳವು ವಿಶಿಷ್ಟವಾಗಿದೆ. ಈ ಬಾರಿ 800 ಭಜನಾ ತಂಡಗಳು ಭಾಗವಹಿಸಿ ತಮ್ಮ ಸಂಗೀತ ಸುಧೆಯನ್ನು ಭಕ್ತರಿಗೆ ಉಣಬಡಿಸಿರುವುದು ಸಂತೋಷದಾಯಕವಾಗಿದೆ. ಇಂತಹ ವೇದಿಕೆಗಳಿಂದ ಕಲೆ, ಸಾಹಿತ್ಯ, ಸಂಗೀತ ಉಳಿಸಿ ಬೆಳಸಲು ಸಹಾಯವಾಗುತ್ತಿದೆ. ಯುವಜನತೆ ಇಂತಹ ಕಾರ್ಯಕ್ರಮಗಳಿಗೆ ಆಕರ್ಷಿತರಾಗಿ ಪಾಲ್ಗೊಂಡು ದೇಶಿಯ ಸಂಸ್ಕೃತಿಯನ್ನು ಕಾಪಾಡಬೇಕಾಗಿದೆ ಜಾತ್ಯತೀತವಾಗಿ ನಡೆಯುವ ಸುತ್ತೂರು ಜಾತ್ರಾ ಮಹೋತ್ಸವವು ಮಾನವನ ವಿಕಾಸಕ್ಕೆ ಪರಿಣಾಮಕಾರಿಯಾಗಿದೆ. ಅದಕ್ಕಾಗಿ ಶ್ರೀಮಠಕ್ಕೆ ನನ್ನ ಕೃತಜ್ಞತೆಯನ್ನು ಅರ್ಪಿಸುತ್ತೇನೆ. – ವಿ.ಪ್ರಿಯದರ್ಶಿನಿ

1ನೇ ಪುಟದಿಂದ

## ಶಿಕ್ಷಣ ಕ್ಷೇತ್ರಕ್ಕೆ ಶ್ರೀಮಠದ ಕೊಡುಗೆ ಅಪಾರ

ಇಲ್ಲಿ ವಿದ್ಯಾಭ್ಯಾಸ ಮಾಡಿದ ಪ್ರತಿಯೊಬ್ಬ ವಿದ್ಯಾರ್ಥಿಯು ಮುಂದೆ ಒಬ್ಬ ಪ್ರಜ್ಞಾವಂತ ಪ್ರಜೆಯಾಗಿ ಬಾಳುವುದರಲ್ಲಿ ಸಂಶಯವಿಲ್ಲ. 60ರ ದಶಕದಲ್ಲಿ ಕೃಷಿ ಕ್ಷೇತ್ರದಲ್ಲಿ ಕುಂಠಿತಗೊಂಡಿದ್ದ ಭಾರತವು 80ರ ದಶಕದ ನಂತರ ಹೊಸ ಕ್ರಾಂತಿಯನ್ನೇ ಸೃಷ್ಟಿಸಿದೆ. ಹೊರ ರಾಷ್ಟ್ರಗಳಿಗೂ ಆಹಾರ ಧಾನ್ಯಗಳನ್ನು ರಫ್ತು ಮಾಡುವಷ್ಟರ ಮಟ್ಟಿಗೆ ಭಾರತ ಬಲಿಷ್ಠವಾಗಿ ಇಂದು ಬೆಳೆದಿದೆ. ಸುತ್ತೂರು ಜಾತ್ರೆಯು ಕೃಷಿಯ ಬಗ್ಗೆ ಚರ್ಚಿಸಲು ಒಂದು ದಿನವನ್ನೇ ಮೀಸಲಾಗಿರಿಸಿ ಅನಕ್ಷರಸ್ಥ ರೈತರನ್ನು ಕೃಷಿಯ ವಿಚಾರದಲ್ಲಿ ವಿದ್ಯಾವಂತರನ್ನಾಗಿ ಮಾಡುತ್ತಿದೆ. ಹಾಗೆಯೇ ಜಾತ್ರೆಯ ಮೂಲಕ ಸಾರ್ವಜನಿಕರಿಗೆ ಮಠದ ಪರಂಪರೆ, ಇತಿಹಾಸವನ್ನು ತಿಳಿಸಿ ಧರ್ಮದಿಂದ ಬಾಳುವಂತೆ ಸಂದೇಶವನ್ನು ನೀಡುತ್ತಿದೆ. ಇಂತಹ ಕಾರ್ಯಕ್ರಮಗಳಿಗೆ ಸರ್ಕಾರವು ಬೆಂಬಲವಾಗಿ ನಿಲ್ಲುತ್ತದೆ ಎಂದು ನುಡಿದರು. –ಕು. ಹರ್ಷಿತ ಎಂ

## ರಾಸುಗಳ ಫಲಿತಾಂಶ



**ಹಾಲು ಹಲ್ಲಿನ ಜೋಡಿ ರಾಸುಗಳ ವಿಭಾಗದಲ್ಲಿ** ಟಿ. ನರಸೀಪುರ ತಾಲ್ಲೂಕು ಮುಡುಕನಪುರದ ಶ್ರೀ ಮರಿಸ್ವಾಮಿರವರು ತಮ್ಮ ಮುದ್ದಾದ ಹಾಲುಹಲ್ಲಿನ ಜೋಡಿ ರಾಸುಗಳ ತುಂಟ ಪ್ರದರ್ಶನದಿಂದ ಪ್ರಥಮ ಬಹುಮಾನ ಗಳಿಸಿದರೆ, ಮಂಡ್ಯದ ಶ್ರೀ ಎಂ.ಎಸ್. ಕಿರಣ್‌ರವರ ಚುರುಕಾದ ರಾಸುಗಳು ದ್ವಿತೀಯ ಬಹುಮಾನ ಪಡೆದರೆ, ತೃತೀಯ ಬಹುಮಾನವನ್ನು ಮೈಸೂರು ತಾಲ್ಲೂಕು ಪುಟ್ಟೇಗೌಡನ ಹುಂಡಿಯ ಶ್ರೀ ರಾಜುರವರ ರಾಸುಗಳು ಪಡೆಯುವಲ್ಲಿ ಯಶಸ್ವಿಯಾದವು.

**ಎರಡು ಹಲ್ಲಿನ ಜೋಡಿ ರಾಸುಗಳ ವಿಭಾಗದಲ್ಲಿ** ಮಂಡ್ಯ ಜಿಲ್ಲೆ ಮಳವಳ್ಳಿ ತಾಲ್ಲೂಕು ಚೆನ್ನಿಪುರದ ಶ್ರೀ ಕುಳ್ಳೇಗೌಡರವರ ಜೋಡಿ ರಾಸುಗಳು ತಮ್ಮ ಜೋಡಿ ಹಲ್ಲುಗಳನ್ನು ಪ್ರದರ್ಶಿಸಿ ಪ್ರಥಮ ಬಹುಮಾನವನ್ನು ಪಡೆದರೆ, ಮಂಡ್ಯ ತಾಲ್ಲೂಕಿನ ಕಲ್ಲಹಳ್ಳಿಯ ಶ್ರೀ ಕೆ.ಎಂ. ಮಾದೇಗೌಡರವರ ಜೋಡಿ ರಾಸುಗಳು ಹುಲ್ಲು ಮೇಯುತ್ತ ಪ್ರದರ್ಶಿಸಿದ ಹಲ್ಲಿಗೆ ಮನಸೋತು ದ್ವಿತೀಯ ಬಹುಮಾನವನ್ನು ಪಡೆದುಕೊಂಡರೆ, ಮಂಡ್ಯ ತಾಲ್ಲೂಕಿನ ಚಲನಾಯಕನಹಳ್ಳಿಯ ಶ್ರೀ ರಾಜೇಗೌಡರವರ ಜೋಡಿ ರಾಸುಗಳು ಮಾಡಿದ ಮೋಡಿಯಿಂದ ತೃತೀಯ ಬಹುಮಾನವನ್ನು ಪಡೆದವು.

**ನಾಲ್ಕು ಹಲ್ಲಿನ ಜೋಡಿ ರಾಸುಗಳ ವಿಭಾಗದಲ್ಲಿ** ಟಿ.ನರಸೀಪುರ ತಾಲ್ಲೂಕಿನ ಮುಡುಕನಪುರದ ಶ್ರೀ ನಂಜುಂಡಸ್ವಾಮಿರವರ ರಾಸುಗಳ ಅಂದ ಚಂದದಿಂದ ಪ್ರಥಮ ಬಹುಮಾನ ಗಳಿಸಿದರೆ, ಶ್ರೀರಂಗಪಟ್ಟಣ ತಾಲ್ಲೂಕಿನ ದರಸೇಗುಪ್ಪೆಯ ಶ್ರೀ ಪಿ. ಕುಮಾರ್‌ರವರ ರಾಸುಗಳು ದ್ವಿತೀಯ ಬಹುಮಾನವನ್ನು ಜಗಿದು ಪಡೆದವು. 3ನೇ ಬಹುಮಾನವನ್ನು ಟಿ.ನರಸೀಪುರ ತಾಲ್ಲೂಕಿನ ಕಾವೇರಿಪುರದ ಶ್ರೀ ರಾಜೇಶ್‌ರವರ ರಾಸುಗಳು ಗಳಿಸಿದವು.

**ಆರು ಹಲ್ಲಿನ ಜೋಡಿ ರಾಸುಗಳ ವಿಭಾಗದಲ್ಲಿ** ಟಿ.ನರಸೀಪುರ ತಾಲ್ಲೂಕು ಮೂಗೂರಿನ ಶ್ರೀ ರಾಜೇಶ್‌ರವರ ರಾಸುಗಳು ಮನಮೋಹಕವಾಗಿ ಪ್ರಥಮ ಬಹುಮಾನವನ್ನು ಗಳಿಸುವಲ್ಲಿ ಯಶಸ್ವಿಯಾದರೆ, ನಂಜನಗೂಡು ತಾಲ್ಲೂಕು ದೇವರಸನಹಳ್ಳಿಯ ಶ್ರೀ ಮಹದೇವಪ್ರಸಾದ್‌ರವರ ರಾಸುಗಳು ತಮ್ಮ ಘನಗಾಂಭೀರ್ಯದಿಂದ ದ್ವಿತೀಯ ಬಹುಮಾನವನ್ನು ಸ್ವೀಕರಿಸಿದವು. ಮೂರನೇ ಬಹುಮಾನವನ್ನು ಪಾಂಡವಪುರ ತಾಲ್ಲೂಕು ಕೆನ್ನಾಳುವಿನ ಶ್ರೀ ಮನೋಜ್‌ರವರ ರಾಸುಗಳು ಪಡೆದು ನಲಿದವು.

**ಮೊಳೆಹಲ್ಲಿನ ಜೋಡಿ ರಾಸುಗಳ ವಿಭಾಗದಲ್ಲಿ** ಪಾಂಡವಪುರ ತಾಲ್ಲೂಕು ದೊಡ್ಡಬ್ಯಾಡರಹಳ್ಳಿಯ ಶ್ರೀ ಡಿ.ಟಿ. ಧರ್ಮರವರ ಜೋಡಿ ರಾಸುಗಳು ಗತ್ತಿನಿಂದ ಹೆಜ್ಜೆ ಹಾಕುತ್ತಾ ಪ್ರಥಮ ಬಹುಮಾನವನ್ನು ಪಡದರೆ, ಮಳವಳ್ಳಿಯ ಶ್ರೀ ಕಾಯಿ ನಾಗರಾಜುರವರ ರಾಸುಗಳು ಒಡೆಯನ ಜೊತೆ ಅತ್ಮೀಯತೆಯಿಂದ ಇರುವ ಮೂಲಕ ದ್ವಿತೀಯ ಬಹುಮಾನವನ್ನು ಗಳಿಸಿದವು. ಪಾಂಡವಪುರ ತಾಲ್ಲೂಕು ತಿಮ್ಮನಕೊಪ್ಪಲಿನ ಶ್ರೀ ಕೃಷ್ಣೇಗೌಡರವರ ಜೋಡಿ ರಾಸುಗಳು ಮೂರನೇ ಬಹುಮಾನವನ್ನು ಪಡೆದು ಕುಣಿದವು.

**ಬಾಯಿಗೂಡಿದ ಹಲ್ಲಿನ ಜೋಡಿ ರಾಸುಗಳ ವಿಭಾಗದಲ್ಲಿ** ಟಿ.ನರಸೀಪುರ ತಾಲ್ಲೂಕು ಮೂಗೂರಿನ ಶ್ರೀ ಎಸ್. ರಾಜುರವರ ಜೋಡಿ ರಾಸುಗಳು ತಮ್ಮ ಮುಗ್ಧತೆಯ ಫಲವಾಗಿ ಪ್ರಥಮ ಬಹುಮಾನವನ್ನು ಬಾಚುವಲ್ಲಿ ಯಶಸ್ವಿಯಾದವು.

ಮಂಡ್ಯದ ಹೊಸಹಳ್ಳಿಯ ಶ್ರೀ ವಿಜೇಂದ್ರರವರ ಜೋಡಿ ರಾಸುಗಳು ದ್ವಿತೀಯ ಬಹುಮಾನವನ್ನು ಗಳಿಸಿದವು. ತೃತೀಯ ಬಹುಮಾನಕ್ಕೆ ಸುತ್ತೂರಿನ ಶ್ರೀ ಮಂಟೇಸ್ವಾಮಿರವರ ರಾಸುಗಳು ಭಾಜನವಾದವು.

**ಉಳುವ ಜೋಡಿ ಹಸುಗಳ ವಿಭಾಗದಲ್ಲಿ** ನಂಜನಗೂಡು ತಾಲ್ಲೂಕು ಸಣ್ಣಮಲ್ಲಿಪುರದ ಶ್ರೀ ಬಸವಣ್ಣನವರ ಜೋಡಿ ಹಸುಗಳು ಉಳುವ ಯೋಗಿಯ ನೋಡಿಲ್ಲಿ ಎನ್ನುತ್ತಾ ಪ್ರಥಮ ಬಹುಮಾನವನ್ನು ಗೆದ್ದರೆ, ಮಳವಳ್ಳಿ ತಾಲ್ಲೂಕು ರಾಗಿಬೊಮ್ಮನಹಳ್ಳಿಯ ಶ್ರೀ ಮಂಜುನಾಥರವರ ಜೋಡಿ ಹಸುಗಳು ನಾವು ಎಲ್ಲದಕ್ಕೂ ಸೈ ಎನ್ನುತ್ತಾ ದ್ವಿತೀಯ ಬಹುಮಾನವನ್ನು ಪಡೆಯಿತು.

ತೃತೀಯ ಬಹುಮಾನವನ್ನು ಮಳವಳ್ಳಿಯ ಶ್ರೀ ಮನುರವರ ಜೋಡಿ ಹಸುಗಳು ಕಾಮಧೇನು ನಾನು ಎಲ್ಲವನ್ನು ನೀಡುವೆನು ಎನ್ನುತ್ತಾ ಬಹುಮಾನ ಸ್ವೀಕರಿಸಿದವು. ಸಮಾಧಾನಕರ ಬಹುಮಾನಗಳನ್ನು ನಂಜನಗೂಡು ತಾಲೂಕು ಮಾದಯ್ಯನಹುಂಡಿಯ ಶ್ರೀ ಮನುರವರ ಹಸುಗಳು, ಮಂಡ್ಯ ತಾಲ್ಲೂಕು ಗುಳಗಟ್ಟದ ಶ್ರೀ ಕೆಂಪರಾಜುರವರ ಹಸುಗಳು, ಟಿ.ನರಸೀಪುರ ತಾಲ್ಲೂಕು ಕೇತಹಳ್ಳಿಯ ಶ್ರೀ ಸಿದ್ಧಲಿಂಗನಾಯಕರವರ ಹಸುಗಳು ಪಡೆದವು.

ನಂಜನಗೂಡು ತಾಲ್ಲೂಕಿನ ತುಂಬನೇರಳೆ ಗ್ರಾಮದ ಶ್ರೀ ಆನಂದರವರ ಮಿಶ್ರತಳಿ ಹೋರಿಗಳು ಜಾತ್ರೆಯಲ್ಲಿ ಯುವಕರನ್ನೇ ನಾಚಿಸುವಂತೆ ಸಿಂಗಾರಗೊಂಡು ವಿಶೇಷ ಬಹುಮಾನ ಪಡೆಯುತ್ತಾ ಎಲ್ಲರ ಗಮನಸೆಳೆದವು.




**6 ಫೆಬ್ರವರಿ 2019**

**ಪ್ರಾತಃಕಾಲ 4.00 : ಕರ್ತೃಗದ್ದುಗೆ : ಮಹಾರುದ್ರಾಭಿಷೇಕ**
**ಬೆಳಗ್ಗೆ 6.30 : ಬಸವಟ್ಟಿಗೆ : ಸ್ನೇಹ–ಸೌಹಾರ್ದ–ಶಾಂತಿ–ಪ್ರಾರ್ಥನಾ ಪಥಸಂಚಲನ. ಬೆಳಗ್ಗೆ 7.30 : ಷಟ್‌ಸ್ಥಲ ಧ್ವಜಾರೋಹಣ,** ನಿ.ಪ್ರ.ಸ್ವ.ಶ್ರೀ ಇಮ್ಮಡಿ ಚೀಲಾಳ ದೇಶಿಕೇಂದ್ರ ಸ್ವಾಮಿಗಳು, ಶ್ರೀ ವಿರಕ್ತ ಮಠ, ನಂಜೂಪೂರ, ಹೆಚ್.ಡಿ.ಕೋಟೆ ತಾ.
**ಧರ್ಮಸಂದೇಶ : ಷ.ಬ್ರ. ಶ್ರೀ ಮಹದೇವ ಸ್ವಾಮಿಗಳು, ಶ್ರೀ ಪಟ್ಟದ ಮಠ,** ಬೆನಕಹಳ್ಳಿ, ಟಿ.ನರಸೀಪುರ ತಾ.
**ಬೆಳಗ್ಗೆ 10.30 : ಆದಿಜಗದ್ಗುರುಗಳವರ ಉತ್ಸವಮೂರ್ತಿಗೆ, ಮಹಾರುದ್ರಾಭಿಷೇಕ (ಕಪಿಲಾನದಿ ತೀರ), ಅಷ್ಟೋತ್ತರ ಶತಕುಂಭೋತ್ಸವ, ಪಂಚಾಮೃತಾಭಿಷೇಕ. ಮಧ್ಯಾಹ್ನ 12.00 : ಮಹಾಮಂಗಳಾರತಿ ಮಧ್ಯಾಹ್ನ 12.10 : ಕರ್ತೃಗದ್ದುಗೆ : ಅನ್ನಬ್ರಹ್ಮೋತ್ಸವ. ಸಂಜೆ 6.30 : ಉತ್ಸವಮೂರ್ತಿಯನ್ನು ಶ್ರೀಮಠಕ್ಕೆ ಬಿಜಯಂಗೈಸುವುದು**



**ಮಂಗಳವಾರ ಜರುಗಿದ ಶ್ರೀ ವೀರಭದ್ರೇಶ್ವರ ಕೊಂಡೋತ್ಸವ**

# 'ಬಸವತತ್ವದ ಅರಿವು ಎಲ್ಲರಿಗೂ ಅವಶ್ಯಕ'

## ● ಶ್ರೀ ಶಿವಪ್ಪ ಸ್ವಾಮಿಗಳು




ಜಾತ್ರಾ ಮಹೋತ್ಸವದ ಅಂಗವಾಗಿ 5 ಫೆಬ್ರವರಿ 2019ರ ಮುಂಜಾನೆ ನಂಜನಗೂಡು ತಾಲ್ಲೂಕಿನ ಚಿಕ್ಕಕವಲಂದೆ ಗ್ರಾಮದಲ್ಲಿ ಸ್ನೇಹ–ಸೌಹಾರ್ದ–ಶಾಂತಿ ಪ್ರಾರ್ಥನಾ ಪಥಸಂಚಲನ ಕಾರ್ಯಕ್ರಮವನ್ನು ಶ್ರದ್ಧಾ–ಭಕ್ತಿಯಿಂದ ನೆರವೇರಿಸಲಾಯಿತು. ಊರಿನ ಪ್ರಮುಖ ಬೀದಿಗಳಲ್ಲಿ ಸುತ್ತೂರು ಶಾಲೆಯ ಮಕ್ಕಳ ಪಥಸಂಚಲನದೊಂದಿಗೆ ಆದಿಜಗದ್ಗುರು ಶ್ರೀ ಶಿವರಾತ್ರೀಶ್ವರ ಶಿವಯೋಗಿಗಳವರ ಉತ್ಸವ ಮೂರ್ತಿಯನ್ನು ವಿಜೃಂಭಣೆಯಿಂದ ಮೆರವಣಿಗೆ ಮಾಡಲಾಯಿತು.

ಕಾಳಗಿ ತಾಲ್ಲೂಕಿನ ಭರತನೂರು ಶ್ರೀ ವಿರಕ್ತ ಮಠದ ನಿ.ಪ್ರ.ಸ್ವ. ಶ್ರೀ ಚಿಕ್ಕ ಗುರುನಂಜೇಶ್ವರ ಸ್ವಾಮಿಗಳು ಷಟ್‌ಸ್ಥಲ ಧ್ವಜಾರೋಹಣವನ್ನು ನೆರವೇರಿಸಿ ಮಾತನಾಡುತ್ತಾ, ಧ್ಯಾನದ ಮಹತ್ವವನ್ನು ತಿಳಿಸಿದರು. ನಮ್ಮನ್ನು ನಾವು ಮರೆತು ಧ್ಯಾನದಲ್ಲಿ ತಲ್ಲೀನರಾಗಿ ಸುತ್ತೂರು ಶಿವರಾತ್ರೀಶ್ವರರನ್ನು ಕಾಣಬೇಕು. ನಡೆದಾಡುವ ದೇವರೆಂದು ಪ್ರಸಿದ್ಧರಾಗಿದ್ದ ಸಿದ್ಧಗಂಗೆಯ ಶ್ರೀ ಶಿವಕುಮಾರ ಮಹಾಸ್ವಾಮಿಗಳು ನಮ್ಮನ್ನು ಭೌತಿಕವಾಗಿ ಅಗಲಿದ್ದರೂ ಸಹ ನಮ್ಮೆಲ್ಲರ ಹೃದಯದಲ್ಲಿ ನೆಲೆಸಿ ಸರ್ವರನ್ನೂ ಪೊರೆಯುತ್ತಿದ್ದಾರೆ ಎಂದು ಹೇಳಿದರು. ಸುತ್ತೂರು ಶ್ರೀಕ್ಷೇತ್ರದ ಕಾರ್ಯಕ್ರಮಗಳನ್ನು ಶ್ಲಾಘಿಸಿದರು.

ಮಳವಳ್ಳಿ ತಾಲ್ಲೂಕು ದೊಡ್ಡಬೂವಳ್ಳಿಯ ಶ್ರೀ ಪಟ್ಟದ ಮಠದ ಷ.ಬ್ರ.ಶ್ರೀ ಶಿವಪ್ಪಸ್ವಾಮಿಗಳವರು ಧರ್ಮಸಂದೇಶವನ್ನು ನೀಡುತ್ತಾ, ಮಾನವನ ದೇಹವು ಪಂಚಭೂತಗಳಿಂದಾಗಿದೆ. ಪರಶಿವನನ್ನು ಕಾಣಲು ಪಂಚಾಕ್ಷರಿ ಮಂತ್ರದ ಸ್ಮರಣೆಯೇ ಸುಲಭದ ದಾರಿಯಾಗಿದೆ. ಅಲ್ಲದೆ ಲಿಂಗಪೂಜೆಯ ಜೊತೆಗೆ ಅಂಗಪೂಜೆ ಬಹುಮುಖ್ಯವಾಗಿದ್ದು, ಪಂಚಲಿಂಗಗಳು ನಮ್ಮಲ್ಲಿಯೇ ಅಡಗಿವೆ. ಬಸವತತ್ವದ ಅರಿವು ಎಲ್ಲರಿಗೂ ಅವಶ್ಯಕವಾಗಿದೆ. ಸುತ್ತೂರು ಶ್ರೀಗಳು ಬಸವತತ್ವದ ಪ್ರಚಾರಕ್ಕಾಗಿ ಇಂತಹ ಮಹತ್ಕಾರ್ಯವನ್ನು ಕೈಗೊಂಡಿದ್ದಾರೆ ಎಂದು ಹೇಳಿದರು. –ಜೆ.ಎನ್.ಕುಮಾರ, ಟಿ.ಬಿ. ಪುಣ್ಯ, ಯು.ಸ್ವಾತಿ

# ಭಜನಾ ಮೇಳ ಪ್ರಶಸ್ತಿ ಪ್ರದಾನ

**ಮ**ಹಿಳೆಯರ ಏಕತಾರಿ ವಿಭಾಗದ ಭಜನಾ ಸ್ಪರ್ಧೆಯಲ್ಲಿ ಹೆಚ್.ಡಿ. ಕೋಟೆ ಎಂ. ಕನ್ನೇನಹಳ್ಳಿಯ ಶ್ರೀ ಗುರುಬಸಪ್ಪ ಸ್ವಾಮಿ ಮಹಿಳಾ ತಂಡ ಪ್ರಥಮ ಬಹುಮಾನವನ್ನು ಶಿವಶರಣರ ವಚನಗಳನ್ನು ಸುಮಧುರವಾಗಿ ಹಾಡುವ ಮೂಲಕ ಪಡೆದರೆ, ಮಂಡ್ಯದ ಮಹಿಳಾ ಏಕತಾರಿ ತಂಡ ಎರಡನೇ ಬಹುಮಾನವನ್ನು ಪಡೆಯಿತು. ಚನ್ನಪಟ್ಟಣ್ಣ ಬೇವೂರಿನ ಮಹಿಳೆಯರ ಭಜನಾ ತಂಡ ಮೂರನೇ ಬಹುಮಾನವನ್ನು ಮುಡಿಗೇರಿಸಿಕೊಂಡರು, ಮಂಡ್ಯದ ಹಳೇಬೀಡಿನ ಶ್ರೀ ರೇವಣ್ಣಸಿದ್ದೇಶ್ವರ ಭಜನಾ ಮಂಡಳಿ ನಾಲ್ಕನೇ ಬಹುಮಾನವನ್ನು ಅರ್ಥಪೂರ್ಣವಾದ ಭಜನೆಗಳನ್ನು ಹಾಡುವ ಮೂಲಕ ಪಡೆದು ಸಭಿಕರಿಗೆ ಮೆಚ್ಚುಗೆಗೆ ಪಾತ್ರವಾಯಿತು. ಮಂಡ್ಯದ ಕಾಸರವಾಡಿಯ ಶ್ರೀ ಈಶ್ವರಮ್ಮ ಕಲಾಬಳಗ ಐದನೇ ಬಹುಮಾನವನ್ನು ಉತ್ತಮ ಕಾರ್ಯಕ್ರಮ ನಡೆಸಿಕೊಡುವ ಮೂಲಕ ಪಡೆದುಕೊಂಡಿತು.

ಪುರುಷರ ಏಕತಾರಿ ವಿಭಾಗದ ಭಜನಾ ಸ್ಪರ್ಧೆಯಲ್ಲಿ ಚಿಕ್ಕಮಗಳೂರಿನ ಶ್ರೀ ಬಸವೇಶ್ವರ ಭಜನಾ ಕಲಾಸಂಘ ಪ್ರೇಕ್ಷಕರ ಮನತಣಿಸುವ ಮೂಲಕ ಪ್ರಥಮ ಬಹುಮಾನವನ್ನು ಪಡೆದರೆ. ಬೆಳಗಾಂನ ಮಲ್ಲಮ್ಮನ ಬೆಳವಡಿಯ ಕಾಳಿಕಾದೇವಿ ಏಕತಾರಿ ತಂಡ ತಮ್ಮ ಕಂಠಸಿರಿಯಿಂದ ಎರಡನೇ ಬಹುಮಾನವನ್ನು ಪಡೆಯುವಲ್ಲಿ ಯಶಸ್ವಿಯಾಯಿತು, ಧಾರವಾಡದ ಬೇಗೂರಿನ ಶ್ರೀ ಸಿದ್ದಲಿಂಗೇಶ್ವರ ಭಜನ ತಂಡದವರು ಮೂರನೇ ಬಹುಮಾನವನ್ನು ಭಜನೆಯ ಸುಂದರ ವಾತಾವರಣ ಸೃಷ್ಟಿಸುವ ಮೂಲಕ ಪಡೆಯಿತು, ಹಾಸನ ಜಿಲ್ಲೆಯ ಕರಗುಂದದ ಶ್ರೀ ಜೇನುಕಲ್ ಸಿದ್ದೇಶ್ವರ ಯುವಕರ ಸಂಘ ನಾಲ್ಕನೇ ಬಹುಮಾನವನ್ನು ಹಾಗೂ ಮುಧೋಳಿನ ಬುದ್ಧಿಯ ಸುಜ್ಞಾನ ಸಂಸ್ಕೃತಿ ಕಲಾ ತಂಡ ಕಲಾಸಕ್ತರ ಆಸಕ್ತಿಯನ್ನು ಇಮ್ಮಡಿಗೊಳಿಸುವ ಮೂಲಕ ಐದನೇ ಬಹುಮಾನವನ್ನು ಪಡೆದುಕೊಂಡರು.




**ಶ್ರೀ ನಟರಾಜ ಸ್ವಾಮಿಗಳವರಿಂದ ಬಹುಮಾನ ಪಡೆದ ಭಜನಾ ಮೇಳದಲ್ಲಿ ವಿಜೇತರಾದ ವಿಜೇತೆಯರು**

ಪುರುಷರ ವಿಭಾಗದ ಭಜನೆ ಸ್ಪರ್ಧೆಯಲ್ಲಿ ಚಾಮರಾಜನಗರ ತಾಲ್ಲೂಕಿನ ಕಟ್ನವಾಡಿಯ ಪುರುಷರ ಭಜನಾ ಹಾಗೂ ಸಾಂಸ್ಕೃತಿಕ ಕಲಾ ಸಂಘದವರು ಭಜನಾ ಮೇಳಕ್ಕೆ ಮೆರುಗು ತರುವಂತೆ ಮೇಲುದನಿಯ ಹಾಡುಗಳನ್ನು ಹಾಡಿ ಪ್ರಥಮ ಬಹುಮಾನವನ್ನು ಗಿಟ್ಟಿಸಿಕೊಂಡರೆ, ಬಾಗಲಕೋಟೆ ಜಮಖಂಡಿಯ ಮಲ್ಲಿಕಾರ್ಜುನ ಭಜನಾ ಮಂಡಳಿಯವರ ತಮ್ಮ ಕಂಠಸಿರಿಯಿಂದ ಎರಡನೇ ಬಹುಮಾನವನ್ನು ಪಡೆದರು. ಮೂರನೇ ಬಹುಮಾನವನ್ನು ಧಾರವಾಡದ ಹುಲ್ಲುಂಬಿಯ ಶ್ರೀ ಬಸವೇಶ್ವರ ಭಜನಾ ತಂಡದವರು ವಿಶೇಷ ಗಾಯನದ ಮೂಲಕ ಪಡೆದರೆ, ಹೆಚ್.ಡಿ. ಕೋಟೆ ತಾಲ್ಲೂಕು ಸರಗೂರಿನ ಶ್ರೀ ರಾಮಕಲಾ ಬಳಗದವರು ರಾಮನ ಭಜನೆಗಳನ್ನು ಹಾಡುವ ಮೂಲಕ ನಾಲ್ಕನೇ ಬಹುಮಾನವನ್ನು ಮುಡಿಗೇರಿಸಿಕೊಂಡರು. ಐದನೇ ಬಹುಮಾನಕ್ಕೆ ಭಾಜನರಾದವರು ಬಾಗಲಕೋಟೆ ಜಿಲ್ಲೆಯ ನೀರಬೂದಿಹಾಳದ ಶ್ರೀ ಬಸವೇಶ್ವರ ಭಜನಾ ಮಂಡಳಿಯವರು.

ಪುರುಷರ ವಿಭಾಗದ ಸಮಾಧನಾಕರ ಬಹುಮಾನಗಳನ್ನು ದಾವಣಗೆರೆ ಗರ್ಭಗುಡಿಯ ಶ್ರೀ ಸೋಮಲಿಂಗೇಶ್ವರ ಭಜನಾ ಸಂಘ, ಬೆಳಗಾಂನ ಜೋಡಟ್ಟಿಯ ಶ್ರೀ ವೀರಭದ್ರೇಶ್ವರ ಭಜನಾ ಮಂಡಳಿ, ಗದಗದ ಲಕ್ಕುಂಡಿಯ ಶ್ರೀ ಅಲ್ಲಮಪ್ರಭು ಭಜನಾ ಸಂಘ, ಧಾರವಾಡದ ವಗ್ಗರಓಣಿಯ ಶ್ರೀ ಮರುಶಾಂತೇಶ್ವರ ಭಜನಾ ತಂಡ ಮತ್ತು ಹಾವೇರಿಯ ಜೋಯಿಸರ ಹರಳಹಳ್ಳಿಯ ಶ್ರೀ ಬಸವೇಶ್ವರ ಭಜನಾ ತಂಡಗಳು ಹಂಚಿಕೊಂಡವು.



ಪರ್ಯಾಯ ಪಾರಿತೋಷಕ ಪಡೆದ ಸುತ್ತೂರು ಜೆಎಸ್ಎಸ್ ಹಿರಿಯ ಪ್ರಾಥಮಿಕ ಶಾಲೆಯ ವಿದ್ಯಾರ್ಥಿಗಳು

# ಸಾಂಸ್ಕೃತಿಕ ಸ್ಪರ್ಧೆಗಳ ಫಲಿತಾಂಶ

ಸಮೂಹ ನೃತ್ಯ ಸ್ಪರ್ಧೆಯಲ್ಲಿ ಮೈಸೂರಿನ ಜೆ.ಪಿ.ನಗರ ಶಾಲೆಯ ವಿದ್ಯಾರ್ಥಿಗಳು ಪ್ರೇಕ್ಷಕರು ಕಣ್ಣು ಮಿಟುಕಿಸದಂತೆ ಕುಣಿದು ಮೊದಲನೇ ಬಹುಮಾನವನ್ನು ಪಡೆದರೆ, ಎರಡನೇ ಬಹುಮಾನವನ್ನು ಮಾಲೂರು ಶಾಲೆಯ ವಿದ್ಯಾರ್ಥಿಗಳು ಪಡೆದರು. ಮೂರನೇ ಬಹುಮಾನವನ್ನು ಬೆಂಗಳೂರಿನ ಹೆಚ್.ಎಸ್.ಆರ್. ಲೇಔಟ್ ಶಾಲೆಯ ವಿದ್ಯಾರ್ಥಿಗಳು ನಟರಾಜ ನೃತ್ಯ ಶೈಲಿಯಲ್ಲಿ ಹಿಡಿದರೆ, ನಾಲ್ಕನೇ ಬಹುಮಾನವನ್ನು ಮೈಸೂರಿನ ಟೀಚರ್ಸ್ ಕಾಲೋನಿ ಶಾಲೆಯ ವಿದ್ಯಾರ್ಥಿಗಳು ಮುಡಿಗೇರಿಸಿಕೊಂಡರು. ಚಿಕ್ಕಮಂಡ್ಯ ಶಾಲೆಯ ವಿದ್ಯಾರ್ಥಿಗಳು ಐದನೇ ಬಹುಮಾನವನ್ನು ಪಡೆದು ತೃಪ್ತಿಪಟ್ಟರು.

ಶಾಸ್ತ್ರೀಯ ನೃತ್ಯ ಸ್ಪರ್ಧೆಯಲ್ಲಿ ಮೈಸೂರಿನ ಜೆ.ಪಿ.ನಗರದ ಶಾಲೆಯ ವಿದ್ಯಾರ್ಥಿಗಳು ಪ್ರಥಮ ಬಹುಮಾನವನ್ನು ಪಡೆದು ಕುಣಿದರೆ, ಎರಡನೇ ಬಹುಮಾನವನ್ನು ಮಾಲೂರು ಶಾಲೆಯ ವಿದ್ಯಾರ್ಥಿಗಳು ಪಡೆದು ಒಗ್ಗಟ್ಟಿನಿಂದ ನಿಂತರು. ಬೆಂಗಳೂರಿನ ಹೆಚ್.ಎಸ್.ಆರ್. ಲೇಔಟ್ ಶಾಲೆಯ ವಿದ್ಯಾರ್ಥಿಗಳು 3ನೇ ಬಹುಮಾನವನ್ನು ವಿಶೇಷ ನೃತ್ಯಭಂಗಿಯಲ್ಲಿ ಪಡೆದರೆ, 4ನೇ ಬಹುಮಾನವನ್ನು ಮೈಸೂರು ಟೀಚರ್ಸ್ ಲೇಔಟ್ ಶಾಲೆಯ ವಿದ್ಯಾರ್ಥಿಗಳು ಪಡೆದು ತೃಪ್ತಿಪಟ್ಟರು. ಐದನೇ ಬಹುಮಾವನ್ನು ಚಿಕ್ಕಮಂಡ್ಯ ಶಾಲೆಯ ವಿದ್ಯಾರ್ಥಿಗಳು ಪಡೆದರು.

ಸಮೂಹ ಗಾಯನ ಸ್ಪರ್ಧೆಯಲ್ಲಿ ಹೂವಿನಹಗಲಿ ಶಾಲೆಯ ವಿದ್ಯಾರ್ಥಿಗಳು ಪ್ರಥಮ ಬಹುಮಾನವನ್ನು ಕೋಗಿಲೆಯ ಸಿರಿಕಂಠದಿಂದ ಪಡೆದರೆ, ಬೆಂಗಳೂರಿನ ಬನಶಂಕರಿ ಶಾಲೆಯ ವಿದ್ಯಾರ್ಥಿಗಳು ಎರಡನೇ ಬಹುಮಾನ ಪಡೆದು ಸುಶ್ರಾವ್ಯವಾಗಿ ಕೂಗಿದರು. ಮೂರನೇ ಬಹುಮಾನವನ್ನು ಮೈಸೂರಿನ ಮೈಸೂರಿನ ಎಸ್.ಜೆ.ಸಿ.ಇ. ಶಾಲೆಯ ವಿದ್ಯಾರ್ಥಿಗಳು ಕಂಚಿನ ಕಂಠದಿಂದ ಹಾಡುವ ಮೂಲಕ ಪಡೆದರೆ, ನಾಲ್ಕನೇ ಬಹು ಮಾನವನ್ನು ಬೆಂಗಳೂರಿನ ಹೆಚ್.ಬಿ.ಆರ್. ಲೇಔಟ್ ಶಾಲೆಯ ವಿದ್ಯಾರ್ಥಿಗಳು ಪಡೆಯುವಲ್ಲಿ ಯಶಸ್ವಿಯಾದರು, ಐದನೇ ಬಹುಮಾನವನ್ನು ಹೆಚ್.ಎಸ್.ಆರ್. ಲೇಔಟ್ ಶಾಲೆಯ

## ● ಪಬ್ಲಿಕ್ ಶಾಲಾ ಜೂನಿಯರ್ಸ್

ವಿದ್ಯಾರ್ಥಿಗಳು ಬಾಚಿಕೊಂಡರು.

ಸಮೂಹ ಶಾಸ್ತ್ರೀಯ ನೃತ್ಯ ಸ್ಪರ್ಧೆಯಲ್ಲಿ ಮೈಸೂರಿನ ಜೆ.ಪಿ. ನಗರದ ವಿದ್ಯಾರ್ಥಿಗಳು ಪ್ರಥಮ ಬಹುಮಾನ ಪಡೆದು ವೇದಿಕೆಯಲ್ಲಿ ಕುಣಿದರೆ, ದ್ವಿತೀಯ ಬಹುಮಾನವನ್ನು ಮಾಲೂರು ಶಾಲೆಯ ವಿದ್ಯಾರ್ಥಿಗಳು ವಿಶೇಷ ಸಮೂಹ ನೃತ್ಯಭಂಗಿ ಗಳಿಂದ ಜನರ ಚಪ್ಪಾಳೆ ಗಿಟ್ಟಿಸಿ ಪಡೆದರು. ಬೆಂಗಳೂರಿನ ಹೆಚ್.ಎಸ್.ಆರ್. ಲೇಔಟ್ ಶಾಲೆಯ ವಿದ್ಯಾರ್ಥಿಗಳು ಮೂರನೇ ಬಹುಮಾನದಲ್ಲಿ ಕುಳಿತರೆ. ನಾಲ್ಕನೇ ಬಹುಮಾನವನ್ನು ಮೈಸೂರಿನ ಟೀಚರ್ಸ್ ಲೇಔಟ್ ಶಾಲೆಯ ವಿದ್ಯಾರ್ಥಿಗಳು ಗಿಟ್ಟಿಸಿಕೊಂಡರು. ಐದನೇ ಬಹುಮಾನಕ್ಕೆ ಭಾಜನರಾದವರು ಚಿಕ್ಕಮಂಡ್ಯ ಶಾಲೆಯ ವಿದ್ಯಾರ್ಥಿಗಳು.

ಶಾಸ್ತ್ರೀಯ ಸಂಗೀತ ಸ್ಪರ್ಧೆಯಲ್ಲಿ ಬೆಂಗಳೂರಿನ ಬನಶಂಕರಿ ಲೇಔಟ್ ಶಾಲೆಯ ವಿದ್ಯಾರ್ಥಿಗಳು ಪ್ರಥಮ ಬಹುಮಾನವನ್ನು ಸುಶ್ರಾವ್ಯವಾಗಿ ಹಾಡಿ ಪಡೆಯುವಲ್ಲಿ ಯಶಸ್ವಿಯಾದರೆ, ಹೆಚ್.ಎಸ್.ಆರ್. ಲೇಔಟ್ ಶಾಲೆಯ ವಿದ್ಯಾರ್ಥಿಗಳು ದ್ವಿತೀಯ ಬಹುಮಾನವನ್ನು ಶಾಸ್ತ್ರೀಯತೆಗೆ ಮೆರಗು ತರುವಂತೆ ಹಾಡಿ ಪಡೆದರು.

ವಚನಾಧಾರಿತ ನೃತ್ಯ ಸ್ಪರ್ಧೆಯಲ್ಲಿ ಚಿಕ್ಕಮಂಡ್ಯ ಶಾಲೆಯ ವಿದ್ಯಾರ್ಥಿಗಳು ಪ್ರಥಮ ಬಹುಮಾನವನ್ನು ಭಕ್ತಿಪರವಶದ ಲ್ಲಿದ್ದಂತೆ ನೃತ್ಯ ಮಾಡುವ ಮೂಲಕ ಪಡೆದರೆ, ದ್ವಿತೀಯ ಬಹುಮಾನವನ್ನು ಮೈಸೂರಿನ ಜೆ.ಪಿ.ನಗರ ಶಾಲೆಯ ವಿದ್ಯಾರ್ಥಿಗಳು ಪಡೆದರು. ತೃತೀಯ ಬಹುಮಾನಕ್ಕೆ ಭಾಗೆ ಶಾಲೆಯ ವಿದ್ಯಾರ್ಥಿಗಳು ಪಡೆಯುವಲ್ಲಿ ಯಶಸ್ವಿಯಾದರು.

ಹೆಚ್ಚು ಅಂಕಗಳನ್ನು ಗಳಿಸಿದ ಮೈಸೂರಿನ ಜೆ.ಪಿ.ನಗರ ಪಬ್ಲಿಕ್ ಶಾಲೆಯ ವಿದ್ಯಾರ್ಥಿಗಳು ವೇದಿಕೆಯೇ ತಮ್ಮದೆಂದು ತಮ್ಮ ಕಲೆಯನ್ನು ಪ್ರದರ್ಶಿಸುವ ಮೂಲಕ ಪರ್ಯಾಯ ಪಾರಿತೋಷಕವನ್ನು ಪಡೆದು ಬೀಗಿತು.



ಮಹಾ ದಾಸೋಹದಲ್ಲಿ ಪ್ರಸಾದ ಸ್ವೀಕರಿಸುತ್ತಿರುವ ಭಕ್ತಾದಿಗಳು

## ಜಾತ್ರೆಯೊಳಗೊಂದು ಸುತ್ತು...

### ಅಮೋಘವಾದದ್ದು



ನಾಲ್ಕು ವರ್ಷಗಳಿಂದ ಜಾತ್ರೆಗೆ ಬರುತ್ತಿದ್ದೇನೆ, ಬೇರೆ ಜಾತ್ರೆಗಳನ್ನು ನೋಡಿದ್ದೇನೆ ಆದರೆ ಸುತ್ತೂರಿನಲ್ಲಿ ನಡೆಯುವಂತಹ ಜಾತ್ರೆ ಬಹಳ ವಿಶೇಷವೆನಿಸಿದೆ ಹಾಗೂ ಖುಷಿಯನ್ನು ನೀಡಿದೆ. ಪೂಜ್ಯಶ್ರೀಗಳ ಸೇವೆ ಅಮೋಘವಾದದ್ದು ಎಂದು ಹೇಳಿದರು.

–ಶ್ರೀ ಈರಪ್ಪ, ಬಾಗಲಕೋಟೆ

### ಸಾಮರಸ್ಯ ಬೆಸೆಯುವ ಜಾತ್ರೆ



ಸುತ್ತೂರು ಶ್ರೀಕ್ಷೇತ್ರಕ್ಕೆ ಬರುತ್ತಿರುವುದು ಇದೇ ಮೊದಲು, ನಮ್ಮ ಊರಿನಲ್ಲಿ ಹಲವಾರು ಜನ ಸುತ್ತೂರು ಜಾತ್ರೆಯ ಬಗ್ಗೆ ಮಾತನಾಡುವುದನ್ನು ಕೇಳಿದ್ದೆ. ಇಲ್ಲಿಗೆ ಬಂದ ಮೇಲೆ ಎಲ್ಲಾ ಕಾರ್ಯಕ್ರಮಗಳನ್ನು ನೋಡಿ ತುಂಬಾ ಖುಷಿಯಾಗಿದೆ. ದೂರದ ಊರಿನಿಂದ ಬಂದದ್ದು ನನಗೆ ತುಂಬಾ ತೃಪ್ತಿಯಾಗಿದೆ. ಇದು ಸಾಮರಸ್ಯ ನೀಡುವ ಜಾತ್ರೆಯಾಗಿದೆ.


–ಶ್ರೀಮತಿ ಹೈರುನ್, ಗದಗ

### ಅನ್ನದಾತ ಪ್ರಭುಗಳು




ಐದು ವರ್ಷಗಳಿಂದ ಈ ಜಾತ್ರೆಗೆ ಬರುತ್ತಿದ್ದೇನೆ. ಈ ಜಾತ್ರೆ ಒಂದು ವಿಭಿನ್ನವಾದದ್ದು ಈ ಕ್ಷೇತ್ರದ ಪೀಠಾಧಿಪತಿಗಳೇ ಅನ್ನದಾತ ಪ್ರಭುಗಳು, ಮಾತೃ ಹೃದಯವುಳ್ಳವರು. –ಶ್ರೀಮತಿ ನಾಗಮ್ಮ, ದೇಬನೂರು

### ಕೃಷಿಮೇಳ ವಿಭಿನ್ನ




ನಮ್ಮ ಕುಟುಂಬ ಈ ಜಾತ್ರೆಯನ್ನು ನೋಡಲು ಸತತವಾಗಿ ಹತ್ತು ವರ್ಷಗಳಿಂದ ಬರುತ್ತಿದ್ದೇವೆ. ಜಾತ್ರೆಯು ಜನರಿಗೆ ಅರಿವನ್ನು ಮೂಡಿಸುತ್ತಿದೆ. ಇದು ಎಲ್ಲಾ ಜನರ ಜಾತ್ರೆ, ನಾನು ಒಬ್ಬ ನಿವೃತ್ತ ಇಂಜಿನಿಯರ್ ಹಾಗೂ ಕೃಷಿಕ. ಈ ಕೃಷಿ ಮೇಳ ತುಂಬ ವಿಭಿನ್ನವಾಗಿದೆ ಜನರನ್ನು ಜಾಗೃತಿಗೊಳಿಸುವಲ್ಲಿ ಸಫಲವಾಗಿದೆ. –ಶ್ರೀ ಕೃಷ್ಣಪ್ರಸಾದ್, ಬೆಂಗಳೂರು

### ಕ್ಷೇತ್ರದ ಕಾರ್ಯ ಮೆಚ್ಚುವಂತದ್ದು



ಕುಟುಂಬ ಸಮೇತರಾಗಿ 5 ವರ್ಷದಿಂದಲೂ ಈ ಜಾತ್ರೆಗೆ ಬರುತ್ತಿದ್ದೇವೆ. ಇಲ್ಲಿನ ಅನ್ನ ದಾಸೋಹ, ಸಾಂಸ್ಕೃತಿಕ, ಧಾರ್ಮಿಕ ಮತ್ತು ಕೃಷಿ ಮೇಳ ನೋಡಿ ಬಹಳ ಖುಷಿಯಾಗಿದೆ. ಶ್ರೀಗಳ ಕಾರ್ಯ ಮೆಚ್ಚುವಂತದ್ದು. –ಶ್ರೀ ಮನೋಹರ, ಮೈಸೂರು

### ವಿಶ್ವದೆಲ್ಲೆಡೆ ಪ್ರಸಿದ್ಧ



ಜಾತ್ರೆಗೆ ಎರಡು ವರ್ಷಗಳಿಂದ ಬರುತ್ತಿದ್ದೇನೆ. ಇಲ್ಲಿನ ಜನಸಾಗರ ಹಾಗೂ ಅವರಿಗೆ ನೀಡಿರುವ ವ್ಯವಸ್ಥೆಗಳನ್ನು ನೋಡಿ ಖುಷಿಯಾಯಿತು. ಈ ಜಾತ್ರೆಯನ್ನು ಹೊಗಳಲು ಪದಗಳೇ ಸಾಲದು. ಎಲ್ಲರೂ ಶ್ರೀಗಳವರ ಮಾರ್ಗದರ್ಶನ ಪಡೆಯಬೇಕು. ಜಾತ್ರೆಯು ವಿಶ್ವದೆಲ್ಲೆಡೆ ಪ್ರಸಿದ್ಧವಾಗಿದೆ ಎಂದು ಹೇಳಲು ಹೆಮ್ಮೆ ಎನಿಸುತ್ತದೆ. –ಶ್ರೀ ಮಹಾದೇವ, ಹಾಸನ

(ಕು. ಮಂದಾರ & ಕು. ಅಮೂಲ್ಯ)

## ಜಾತ್ರಾ ಮಹೋತ್ಸವ ಸಾಂಸ್ಕೃತಿಕ ಕಾರ್ಯಕ್ರಮಗಳು

**6 ಫೆಬ್ರವರಿ 2019 ಬುಧವಾರ * ಗದ್ದುಗೆ ಆವರಣ**

**ಬೆಳಗ್ಗೆ 7.30 : ಸಾಂಸ್ಕೃತಿಕ ತಿರುಳು : ಜೆಎಸ್‌ಎಸ್ ಶಿಕ್ಷಣ ಸಂಸ್ಥೆಗಳ ವಿದ್ಯಾರ್ಥಿಗಳು**

## ಕುರಿತೋದದೆಯುಂ... ಆಶುಕವಿಯಾದರಿವರ್ !



*ಬಾಗಲಕೋಟೆ ಜಿಲ್ಲೆಯ ಬೀಳಗಿ ತಾಲ್ಲೂಕಿನ ಶ್ರೀ ಸಿದ್ದಪ್ಪ ಬಿದರಿಯವರು ಉತ್ತಮ ಜಾನಪದ ಕವಿಯಾಗಿದ್ದು ಕಲೆಯನ್ನು ಅವಲಂಬಿಸಿ ಜೀವನ ನಡೆಸುತ್ತಿದ್ದಾರೆ. ಅಕ್ಷರಬಲ್ಲವರಿಂದ ತಮ್ಮ ಹಾಡಿಗೆ ಅಕ್ಷರರೂಪ ಕೊಡಿಸಿ ಕವಿತಾ ಸಂಕಲನಗಳನ್ನು ಹೊರತರುತ್ತಿದ್ದಾರೆ. ಕೋಗಿಲೆ ಚೈತ್ರದಲ್ಲಿ ಮಾವಿನ ಚಿಗುರನ್ನು ಸವಿದು ಇನಿದಾಗಿ ಹಾಡುತ್ತದೆ. ಆದರೆ ನಮ್ಮ ನಲ್ಮೆಯ ಶ್ರೀ ಸಿದ್ದಪ್ಪ ಬಿದರಿ ವರ್ಷದ ಮುನ್ನೂರ ಅರವತ್ತೈದು ದಿನವೂ ಭಾವಪೂರ್ಣವಾಗಿ ನಾವಿರುವಲ್ಲೇ ಹಾಡುತ್ತಾರೆ. ಸ್ಥಳದಲ್ಲೇ ಕವಿತೆ ಕಟ್ಟಿ ಭಾವಪೂರ್ಣವಾಗಿ ಹಾಡುವುದು ಇವರ ವಿಶೇಷ. 'ವೃತ್ತಿಯಲ್ಲಿ ಕೃಷಿಕರಾದರೂ ಪ್ರವೃತ್ತಿಯಲ್ಲಿ ಆಶು ಕವಿ' ಇದು ತಾಯಿ ಸರಸ್ವತಿ ನೀಡಿರುವ ವರವಾಗಿದೆ. ಶ್ರಿಯುತರು ಜಾತ್ರಾ ಮಹೋತ್ಸವದಲ್ಲಿ ಭಾಗವಹಿಸಿ ತುಂಬಾ ಅಭಿಮಾನದ ಮಾತುಗಳನ್ನು ಆಡಿದರು.*

*ಸುತ್ತೂರಿನಲ್ಲಿ ನಡೆಯುವ ಎಲ್ಲಾ ಕಾರ್ಯಕ್ರಮಗಳು ಅಚ್ಚುಕಟ್ಟಾಗಿ ನಡೆಯುತ್ತಿವೆ. ಪೂಜ್ಯ ಶ್ರೀಗಳ ಮಾರ್ಗದರ್ಶನದಲ್ಲಿ ಶೈಕ್ಷಣಿಕ, ಧಾರ್ಮಿಕ ಮತ್ತು ಸಾಮಾಜಿಕವಾಗಿ ಹಲವಾರು ಜನಪಯೋಗಿ ಕಾರ್ಯಕ್ರಮಗಳು ನಡೆಯುತ್ತಿರುವುದು ಹರ್ಷವನ್ನು ಉಂಟುಮಾಡಿದೆ. ಕೃಷಿಮೇಳ, ವಸ್ತುಪ್ರದರ್ಶನ, ದನಗಳ ಜಾತ್ರೆ ಹೀಗೆ ಹಲವು ಕಾರ್ಯಕ್ರಮಗಳು ಸಾರ್ವಜನಿಕರಿಗೆ ತುಂಬಾ ಉಪಯೋಗವಾಗಿದೆ ಅದಕ್ಕೆ ಶ್ರೀಮಠವನ್ನು ಭಕ್ತಿಪೂರ್ವಕವಾಗಿ ವಂದಿಸುತ್ತೇನೆ ಎಂದು ನುಡಿದರು.*



ಜಾತ್ರಾ ಮಹೋತ್ಸವದಲ್ಲಿ ಸ್ವಚ್ಛತಾ ಅಭಿಯಾನದ ಜಾಗೃತಿ ಕಾರ್ಯಕ್ರಮ

## 'ಗೋ ಸಂರಕ್ಷಣೆಯಿಂದ ಕೃಷಿ ಬೆಳೆಯುತ್ತದೆ'

**● ಎಂ.ವೈ. ಪಾಟೀಲ್**



ಸಾಂಸ್ಕೃತಿಕ ಮೇಳ ಹಾಗೂ ದನಗಳ ಜಾತ್ರೆ ಸಮಾರೋಪ ಸಮಾರಂಭದಲ್ಲಿ ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ಅಫ್ಜಲ್‌ಪುರ ಶಾಸಕರಾದ ಶ್ರೀ ಎಂ.ವೈ. ಪಾಟೀಲ್‌ರವರು ಮಾತನಾಡುತ್ತಾ, ಈ ಜಾತ್ರೆ ಧಾರ್ಮಿಕತೆಯಿಂದ ಕೂಡಿದ್ದರೂ ಸಹ ಸಮಾಜದ ಏಳಿಗೆಯ ಉದ್ದೇಶವನ್ನು ಹೊಂದಿದೆ. ಸಾಂಸ್ಕೃತಿಕ ಕಲೆಗಳನ್ನು ಜನತೆ ಮರೆಯುತ್ತಿರುವ ಈ ಸಂದರ್ಭದಲ್ಲಿ ಗ್ರಾಮೀಣ ಮಟ್ಟದ ಕಲಾವಿದರನ್ನು ಗುರುತಿಸಿ ಅವರಿಗೆ ಜಾತ್ರಾ ಮಹೋತ್ಸವದಲ್ಲಿ ವೇದಿಕೆಯನ್ನು ಕಲ್ಪಿಸಿಕೊಡುವಂತಹ ಕೆಲಸವನ್ನು ಶ್ರೀಮಠ ಮಾಡುತ್ತಿದೆ. ಇವತ್ತಿನ ದಿನಗಳಲ್ಲಿ ದನಗಳನ್ನು ನಿರ್ಲಕ್ಷಿಸುತ್ತಿರುವುದರಿಂದ ಅವುಗಳ ಸಂತತಿಯು ಕಡಿಮೆಯಾಗುತ್ತಿದೆ. ಇದರಿಂದ ಹೈನುಗಾರಿಕೆ ಹಾಗೂ ಕೃಷಿಯಲ್ಲಿಯೂ ಹಿನ್ನಡೆಯಾಗುತ್ತಿದೆ. ಅದಕ್ಕಾಗಿ ರೈತರಿಗೆ ಉತ್ತೇಜನ ಕೊಡುವಂತಹ ಕಾರ್ಯಕ್ರಮಗಳನ್ನು ಸುತ್ತೂರಿನಲ್ಲಿ ಹಮ್ಮಿಕೊಳ್ಳಲಾಗಿದೆ. ಸರ್ಕಾರಗಳು ಮಾಡಲಾಗದ ಕಾರ್ಯಗಳನ್ನು ಜೆಎಸ್‌ಎಸ್ ಸಂಸ್ಥೆಯು ಮಾಡುತ್ತಿರುವುದು ಪ್ರಶಂಸನೀಯ ಎಂದು ಹೇಳಿದರು.– ಕೆ.ಎಸ್. ತೇಜಶ್ರೀ



ಏಕತಾರಿ ವಿಭಾಗದಲ್ಲಿ ಬಹುಮಾನ ಗಳಿಸಿದ ಹಿರಿಯ ಕಲಾವಿದರು

## ಶ್ರೀಕ್ಷೇತ್ರದಲ್ಲಿ ಭಜನೆ ಮಾಡುವುದೇ ಒಂದು ಪುಣ್ಯ

**● ಶ್ರೀ ಆರ್.ನರೇಂದ್ರ**



ಭಜನಾ ಮೇಳ ಸಮಾರೋಪ ಸಮಾರಂಭದಲ್ಲಿ ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ಶಾಸಕರು ಹಾಗೂ ಆಹಾರ ಮತ್ತು ನಾಗರೀಕ ಸರಬರಾಜು ನಿಗಮದ ಅಧ್ಯಕ್ಷರಾದ ಶ್ರೀ ಆರ್.ನರೇಂದ್ರರವರು ಮಾತನಾಡಿ ಭಜನೆ ನಮ್ಮ ಸಾಂಪ್ರದಾಯಿಕ ಕಲೆಯಾಗಿದ್ದು, ಮನುಷ್ಯರಿಗೆ ಸಂಸ್ಕಾರ ಕೊಡುವ ನೀತಿಯುತ ವಿಚಾರಗಳನ್ನು ಒಳಗೊಂಡಿದೆ. ಸುತ್ತೂರು ಜಾತ್ರೆಯಲ್ಲಿ ಭಜನಾ ಮೇಳ ಕಾರ್ಯಕ್ರಮವನ್ನು ಆಯೋಜಿಸುವ ಮೂಲಕ ಭಜನೆ ಮಾಡಲು ಅವಕಾಶ ಮಾಡಿಕೊಟ್ಟು, ನಮ್ಮ ಸಂಸ್ಕೃತಿಯನ್ನು ಉಳಿಸಿ ಬೆಳೆಸುವ ಉತ್ತಮ ಕೆಲಸ ಮಾಡಲಾಗುತ್ತಿದೆ. ಶ್ರೀಕ್ಷೇತ್ರದಲ್ಲಿ ಭಜನೆ ಮಾಡಿ ಹೋಗುವುದೇ ಒಂದು ಪುಣ್ಯ, ಇಲ್ಲಿ ಭಜನೆ ಮಾಡಿ ಹೋದಾಗ ಸಿಗುವ ಶಾಂತಿ ನೆಮ್ಮದಿಯು ಯಾವ ಪ್ರಶಸ್ತಿಗೂ ಸರಿ ಸಾಟಿಯಿಲ್ಲ. ಈ ಜಾತ್ರೆಯಲ್ಲಿ ಭಾಗವಹಿಸಿ ಭಜನೆ ಮಾಡುವ ಎಲ್ಲರೂ ಪುಣ್ಯವಂತರಾಗಿದ್ದಾರೆ. ಭಜನಾ ಮೇಳದಲ್ಲಿ ಬಹುಮಾನ ಪಡೆಯುವುದು ಮುಖ್ಯವಲ್ಲ ಭಾಗವಹಿಸುವುದು ಮುಖ್ಯ. ಎಲ್ಲಾ ಧರ್ಮಗಳ ಸಾರ ಮಾನವೀಯತೆ ಬೋಧಿಸುವುದೇ ಆಗಿದೆ. ಜಗತ್ತಿಗೆ ಒಳ್ಳೆಯದು ಮಾಡಬೇಕೆಂದು ಎಲ್ಲ ಧರ್ಮಗಳು ಬಯಸುತ್ತವೆ ಎಂದು ಹೇಳಿದರು. –ವಿನೋದ್.ಸಿ




ಪ್ರೌಢಶಾಲಾ ಗ್ರಾಮೀಣ ವಿಭಾಗ – ಮುಖ್ಯ ಅತಿಥಿಗಳೊಂದಿಗೆ ಪರ್ಯಾಯ ಪಾರಿತೋಷಕ ಪಡೆದ ಸುತ್ತೂರು ಜೆಎಸ್‌ಎಸ್ ಪ್ರೌಢಶಾಲೆಯ ವಿದ್ಯಾರ್ಥಿನಿಯರು

# ಶುಚಿ–ರುಚಿ ಅಡುಗೆ ಸ್ಪರ್ಧೆ



**ಪಾಕ ಪ್ರವೀಣೆಯರು: ಜಾತ್ರಾ ಮಹೋತ್ಸವದಲ್ಲಿ ಸಿರಿಧಾನ್ಯ ಬಳಸಿ ಅಡುಗೆ ತಯಾರಿಸುತ್ತಿರುವ ಸ್ಪರ್ಧಿಗಳು**

ಜಾತ್ರಾ ಮಹೋತ್ಸವ ಅಂಗವಾಗಿ ವಸ್ತುಪ್ರದರ್ಶನದ ಆವರಣದಲ್ಲಿ ಆಯೋಜಿಸಲಾಗಿದ್ದ ಅಡುಗೆ ಸ್ಪರ್ಧೆಯಲ್ಲಿ ಮಹಿಳೆಯರು ವಿವಿಧ ಭಾಗಗಳಿಂದ ಭಾಗವಹಿಸಿದ್ದರು. ಕೆ.ಆರ್ ನಗರ ತಾಲ್ಲೂಕಿನ ಹನುಮನಹಳ್ಳಿ ನಿವಾಸಿಯಾದ ಇಂದ್ರಮ್ಮನವರು ಕಳೆದ ವರ್ಷದಿಂದ ಸ್ಪರ್ಧೆಯಲ್ಲಿ ಭಾಗವಹಿಸುತ್ತಿದ್ದು ಇವರು ಮೈಸೂರಿನಲ್ಲಿ ನಡೆದ ಸಿರಿಧಾನ್ಯಗಳ ಮೇಳದಲ್ಲಿ ದ್ವಿತೀಯ ಬಹುಮಾನವನ್ನು ಪಡೆದಿರುತ್ತಾರೆ. ಕೃಷಿ ಕೇಂದ್ರದ ಸದಸ್ಯರಾಗಿದ್ದು ಅತ್ಯುತ್ತಮ ರೈತ ಮಹಿಳಾ ಪ್ರಶಸ್ತಿಯನ್ನು ಪಡೆದುಕೊಂಡಿರುತ್ತಾರೆ. ಸ್ಪರ್ಧೆಯ ನಿಯಮದಂತೆ ರಾಗಿ ಪಾಯಸ ಮತ್ತು ರಾಗಿಯ ಚಕ್ಕುಲಿಯನ್ನು ತಯಾರಿಸಿದ್ದರು.

ಮೈಸೂರಿನ ಅರವಿಂದ ನಗರದ ವೃದ್ಧಾಶ್ರಮ ನಿವಾಸಿಗಳಾದ ಜಯಂತಿ ಪೈರವರು ದಸರಾ ಅಡುಗೆ ಸ್ಪರ್ಧೆಯಲ್ಲಿ ಬಹುಮಾನಗಳನ್ನು ಗಳಿಸಿದ್ದು ಸುತ್ತೂರಿನಲ್ಲಿ ಮೊದಲ ಬಾರಿಗೆ ನವಣೆಯ ವಾಂಗೀಬಾತ್ ಸಾಮೆಯ ಹಾಲು ಪಾಯಸ ತಯಾರಿಸಿದ್ದರು.

ಮೈಸೂರಿನ ಬನ್ನಿಮಂಟಪದ ಜೆಎಸ್ಎಸ್ ದಂತ ಕಾಲೇಜಿನ ಉಪನ್ಯಾಸಕಿಯಾದ ಸುಷ್ಮಾರವರು ಅಡುಗೆ ಸ್ಪರ್ಧೆಯಲ್ಲಿ ಮೊದಲ ಬಾರಿಗೆ ಭಾಗವಹಿಸುತ್ತಿರುವುದು ನನಗೆ ಭಯವಾದರೂ ಸಂತೋಷವಾಗಿದೆ. ನವಣೆ ಉಂಡೆ ಮತ್ತು ಸಾಮೆ ಚುರುಮುರಿ ತಯಾರಿಸುತ್ತಿದ್ದೇನೆ ಎಂದು ತಿಳಿಸಿದರು.

ನಂಜನಗೂಡಿನ ನಂಜುಂಡೇಶ್ವರ ಮಹಿಳಾ ಒಕ್ಕೂಟದ ಅಧ್ಯಕ್ಷರಾದ ಶ್ರೀ ರತ್ನಮ್ಮ ಚಿನ್ನಸ್ವಾಮಿಯವರು ಕಳೆದ ಬಾರಿ ರಾಗಿ ರೊಟ್ಟಿ ಮತ್ತು ರಾಗಿ ಹಲ್ವಾ ತಯಾರಿಸಿದ್ದು, ಈ ಬಾರಿ ಒಬ್ಬಟ್ಟು, ಜೋಳದ ಸಿಹಿ ಉಸುಲಿ, ಜೋಳದ ಖಾರ ಬಜ್ಜಿ, ರಾಗಿ ಹುರಿಹಿಟ್ಟು ಹಾಗೂ ರಾಗಿ ಚಕ್ಕುಲಿ ತಯಾರಿಸಿದ್ದರು. ಹೀಗೆ ಸ್ಪರ್ಧೆಯಲ್ಲಿ ಭಾಗವಹಿಸಿದ್ದ ಮಹಿಳೆಯರು ಸಿರಿಧಾನ್ಯಗಳನ್ನು ಬಳಸಿ ವಿವಿಧ ಬಗೆಯ ತಿಂಡಿ ತಿನಿಸುಗಳನ್ನು ತಯಾರಿಸಿದರು. ಸಿರಿಧಾನ್ಯಗಳ ಮಹತ್ವ ಮತ್ತು ಉಪಯೋಗಗಳನ್ನು ತಿಳಿಯುವುದು ಈ ಸ್ಪರ್ಧೆಯ ಮುಖ್ಯ ಉದ್ದೇಶವಾಗಿತ್ತು. ಸ್ಪರ್ಧೆಯ ತೀರ್ಪುಗಾರರಾಗಿ ಮಹಿಳಾ ಮಕ್ಕಳಾ ಕಲ್ಯಾಣ ಇಲಾಖೆಯ ನಿವೃತ್ತ ಸಹಾಯಕ ನಿರ್ದೇಶಕರಾದ ಶ್ರೀಮತಿ ವೀಣಾರವರು, ಮೈಸೂರಿನ ಡಿ.ಎಫ್.ಆರ್.ಎಲ್‌ನ ನಿವೃತ್ತ ವಿಜ್ಞಾನಿಗಳಾದ ಡಾ. ವಿಭಾಕರ್ ಹಾಗೂ ಮೈಸೂರಿನ ಶ್ರೀಮತಿ ಸೀಮಾರವರು ಆಗಮಿಸಿದ್ದರು. ಸಂಚಾಲಕರಾದ ಶ್ರೀಮತಿ ಜಮುನಾ ಅರಸ್ ಮಾಹಿತಿ ನೀಡಿದರು.–ಸೋಮೇಶ್, ಶುಭಶ್ರೀ




**6 ಫೆಬ್ರವರಿ 2019 ಬುಧವಾರ * ಬೆಳಗ್ಗೆ 10.30**

### ಕೃಷಿ ಮೇಳ ಮತ್ತು ವಸ್ತುಪ್ರದರ್ಶನ : ಸಮಾರೋಪ

**ಸಮ್ಮುಖ : ಜಗದ್ಗುರು ಡಾ. ಶ್ರೀ ತೋಂಟದ** ಸಿದ್ಧರಾಮ **ಮಹಾಸ್ವಾಮಿಗಳು,** ಎಡೆಯೂರು ಶ್ರೀ ಜಗದ್ಗುರು ತೋಂಟದಾರ್ಯ ಸಂಸ್ಥಾನ ಮಠ, ಗದಗ–ಡಂಬಳ, **ಶ್ರೀ ಸ್ವಾಮಿ ಆತ್ಮಜ್ಞಾನಂದ ಮಹಾರಾಜ್,** ಅಧ್ಯಕ್ಷರು, ಶ್ರೀ ರಾಮಕೃಷ್ಣ ಮಠ, ಮೈಸೂರು

**ಅಧ್ಯಕ್ಷತೆ : ಶ್ರೀ ಡಿ.ವಿ. ಸದಾನಂದಗೌಡ,** ಕೇಂದ್ರ ಸಾಂಖ್ಯಿಕ ಮತ್ತು ಕಾರ್ಯಕ್ರಮಾನುಷ್ಠಾನ ಸಚಿವರು

**ಸಮಾರೋಪ ಭಾಷಣ : ಶ್ರೀ** ಸಿದ್ದರಾಮಯ್ಯ, ಶಾಸಕರು ಹಾಗೂ ಮಾಜಿ ಮುಖ್ಯಮಂತ್ರಿಗಳು

**ಬಹುಮಾನ ವಿತರಣೆ : ಕೃಷಿ ಮೇಳ : ಶ್ರೀ ಪಿ.ಟಿ. ಪರಮೇಶ್ವರ ನಾಯ್ಕ್,** ಮುಜರಾಯಿ ಮತ್ತು ಕೌಶಲ್ಯಾಭಿವೃದ್ಧಿ ಸಚಿವರು

**ವಸ್ತುಪ್ರದರ್ಶನ : ಶ್ರೀ ಆರ್. ಧ್ರುವನಾರಾಯಣ, ಲೋಕಸಭಾ ಸದಸ್ಯರು, ಚಾಮರಾಜನಗರ**

**ಮುಖ್ಯ ಅತಿಥಿಗಳು : ಶ್ರೀ** ಸಿ.ಸಿ. **ಪಾಟೀಲ್,** ಶಾಸಕರು ಹಾಗೂ ಮಾಜಿ ಸಚಿವರು, **ಶ್ರೀ ಎಸ್.ಟಿ. ಸೋಮಶೇಖರ್,** ಶಾಸಕರು ಹಾಗೂ ಅಧ್ಯಕ್ಷರು, ಬಿಡಿಎ, **ಶ್ರೀ ಜಿ. ರಘು ಆಚಾರ್,** ವಿಧಾನಪರಿಷತ್ ಸದಸ್ಯರು, ಚಿತ್ರದುರ್ಗ, **ಶ್ರೀ ರವೀಂದ್ರ ಶ್ರೀಕಂಠಯ್ಯ,** ವಿಧಾನಸಭಾ ಸದಸ್ಯರು, ಶ್ರೀರಂಗಪಟ್ಟಣ, **ಶ್ರೀಮತಿ ರಾಣಿ ಸತೀಶ್,** ಮಾಜಿ ಸಚಿವರು, **ಶ್ರೀ ಎಂ.ಕೆ. ಸೋಮಶೇಖರ್,** ಮಾಜಿ ವಿಧಾನಸಭಾ ಸದಸ್ಯರು, **ಡಾ. ಪುಷ್ಪ ಅಮರನಾಥ್,** ಅಧ್ಯಕ್ಷರು, ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿ (ಮಹಿಳಾ ಘಟಕ), **ಶ್ರೀ ಎಂ. ನಾಗೇಂದ್ರಸ್ವಾಮಿ,** ಹೆಚ್ಚುವರಿ ಮಹಾನಿರ್ದೇಶಕರು, ಪ್ರಾದೇಶಿಕ ಜನಸಂಪರ್ಕ ಕಾರ್ಯಾಲಯ, ಬೆಂಗಳೂರು.


## ಸಿರಿಧಾನ್ಯ ಅಡುಗೆ ಸ್ಪರ್ಧೆ ವಿಜೇತರು

ಜಾತ್ರಾ ಮಹೋತ್ಸವದ ಅಂಗವಾಗಿ ವಸ್ತುಪ್ರದರ್ಶನದ ಆವರಣದಲ್ಲಿ ನಡೆದ ಸಿರಿಧಾನ್ಯಗಳ ಅಡುಗೆ ಸ್ಪರ್ಧೆಯಲ್ಲಿ ವಿವಿಧ ಭಾಗಗಳಿಂದ ಆಗಮಿಸಿದ್ದ ಮಹಿಳೆಯರು ಹಲವಾರು ಸಿರಿಧಾನ್ಯಗಳಿಂದ ವಿವಿಧ ರೀತಿಯ ಅಡುಗೆಗಳನ್ನು ತಯಾರಿಸಿದರು. ಸ್ಪರ್ಧೆಯ ನಿಯಮದಂತೆ ಒಂದು ಸಿಹಿ ಹಾಗೂ ಒಂದು ಖಾರ ತಿಂಡಿಗಳನ್ನು ಮಾಡಬೇಕಿತ್ತು. ತೀರ್ಪನ್ನು ಎರಡು ಗುಂಪುಗಳಾಗಿ ವಿಂಗಡಿಸಿ ಸಿಹಿ ತಿಂಡಿಗಳಿಗೆ ಮೂರು ಬಹುಮಾನ ಮತ್ತು ಖಾರ ತಿಂಡಿಗಳಿಗೆ ಮೂರು ಬಹುಮಾನಗಳನ್ನು ವಿತರಿಸಲಾಯಿತು. ತೀರ್ಪಿನ ಅನುಸಾರ ಸಿಹಿ ತಿಂಡಿಗಳ ವಿಭಾಗದಲ್ಲಿ ಮೈಸೂರಿನ ಶ್ರೀಮತಿ ಎಸ್. ಜೆ. ವಿಜಯಲಕ್ಷ್ಮೀರವರಿಗೆ ಪ್ರಥಮ ಬಹುಮಾನ, ಸೋನಹಳ್ಳಿಯ ಶ್ರೀಮತಿ ಶಾರದಾ ಶಿವಸೋಮಾರಾಧ್ಯರವರಿಗೆ ದ್ವಿತೀಯ ಬಹುಮಾನ ಹಾಗೂ ಶ್ರೀಮತಿ ನಿರ್ಮಲಾ ರಂಗಸಮುದ್ರ ರವರಿಗೆ ತೃತೀಯ ಬಹುಮಾನವನ್ನು ನೀಡಲಾಯಿತು. ಖಾರ ತಿಂಡಿಗಳ ವಿಭಾಗದಲ್ಲಿ ಶ್ರೀಮತಿ ಗಾಯತ್ರಿ ಹೆಮ್ಮಿಗೆಯವರಿಗೆ ಪ್ರಥಮ ಬಹುಮಾನ, ಶ್ರೀಮತಿ ಇಂದಿರಮ್ಮರವರಿಗೆ ದ್ವಿತೀಯ ಬಹುಮಾನ ಹಾಗೂ ಶ್ರೀಮತಿ ಕವಿತ ಪಿ ಅರಸ್‌ರವರಿಗೆ ತೃತೀಯ ಬಹುಮಾನವನ್ನು ನೀಡಲಾಯಿತು. ವಿಜೇತರಿಗೆ ಬಹುಮಾನದ ಜೊತೆಗೆ ಸ್ಪರ್ಧಿಸಿದ ಎಲ್ಲರಿಗೂ ಪ್ರಶಂಸಾ ಪತ್ರವನ್ನು ವಿತರಿಸಿಸಲಾಯಿತು. –ಡಿ.ಎನ್. ಶುಭಶ್ರೀ



**ಜಾತ್ರಾ ಮಹೋತ್ಸವದಲ್ಲಿ ನಗುವೇ ಜೀವನ ಸಾಕ್ಷಾತ್ಕಾರ ಎನುತಿಹರು ಶ್ರೀಮತಿ ಸುಧಾ ಬರಗೂರು**

# ಜಾತಿಮುಕ್ತ ಸಮಾಜ ನಿರ್ಮಾಣದಲ್ಲಿ ಶ್ರೀಮಠ : ಶ್ರೀ ಅಡಗೂರು ಹೆಚ್.ವಿಶ್ವನಾಥ್



ಭಜನಾ ಮೇಳದ ಸಮಾರೋಪ ಸಮಾರಂಭದಲ್ಲಿ ಶಾಸಕರು ಹಾಗೂ ಮಾಜಿ ಸಚಿವರಾದ **ಶ್ರೀ ಅಡಗೂರು ಹೆಚ್. ವಿಶ್ವನಾಥ್‌ರವರು** ಮಾತನಾಡಿ ಸುತ್ತೂರು ಶ್ರೀಮಠದಲ್ಲಿ ಯಾವುದೇ ಜಾತಿ ಮತ ಧರ್ಮವನ್ನು ನೋಡದೆ ಎಲ್ಲರೂ ಒಂದೇ ಎನ್ನುವ ಮನೋಭಾವದಿಂದ ವಿದ್ಯಾರ್ಥಿಗಳಿಗೆ ಶಿಕ್ಷಣವನ್ನು ನೀಡಲಾಗುತ್ತಿದೆ. ಇದೊಂದು ಜಾತ್ಯತೀತ ಮಠವಾಗಿದ್ದು, ಜಾತಿಮುಕ್ತ ಸಮಾಜದ ನಿರ್ಮಾಣದಲ್ಲಿ ಶ್ರೀಮಠ ಮಾದರಿಯಾಗಿದೆ. ಸುತ್ತೂರು ಜಾತ್ರೆಯ ಮೂಲಕ ಗ್ರಾಮೀಣ ಜನರಿಗೆ ಸರ್ಕಾರದ ಯೋಜನೆಗಳನ್ನು ತಿಳಿಸುವುದರ ಜೊತೆಗೆ ಕೃಷಿ ಮೇಳವನ್ನು ಆಯೋಜಿಸಿ ಲಕ್ಷಾಂತರ ಗ್ರಾಮೀಣ ಜನರಿಗೆ ಆಧುನಿಕ ಕೃಷಿಯ ಬಗ್ಗೆ ತಿಳುವಳಿಕೆ ಮೂಡಿಸುವ ಶ್ರೀಗಳವರ ಕಾರ್ಯ ಶ್ಲಾಘನೀಯ ಎಂದರು. ಉತ್ತಮ ಸಮಾಜ ನಿರ್ಮಾಣ ಮಾಡಲು ಉತ್ತಮ ನಾಯಕನಿಂದ ಮಾತ್ರ ಸಾಧ್ಯ. ಆದ್ದರಿಂದ ನೀವೆಲ್ಲ ಮತದಾನ ಮಾಡುವಾಗ ಜಾತೀಯತೆಯನ್ನು ಬಿಟ್ಟು ಜಾತ್ಯತೀತವಾಗಿ ಮತದಾನ ಮಾಡಿ ಪ್ರತಿಯೊಬ್ಬರ ಮತವು ಅತ್ಯಮೂಲ್ಯವಾದದ್ದು ಎಂದರು. –ಎಂ. ಚೈತ್ರ

# "ಸರ್ವರಿಗೂ ಸಮಪಾಲು ಸರ್ವರಿಗೂ ಸಮಬಾಳು"




ಸುತ್ತೂರಿನ ಜಾತ್ರಾ ಮಹೋತ್ಸವದ ಅಂಗವಾಗಿ ನಡೆದ ಭಜನಾ ಮೇಳದ ಸಮಾರೋಪ ಸಮಾರಂಭದಲ್ಲಿ ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ವಿಧಾನಸಭಾ ಸದಸ್ಯರಾದ ಶ್ರೀ **ದತ್ತಾತ್ರೇಯ ಸಿ. ಪಾಟೀಲ್ ರೇವೂರ** ಅವರು ಮಾತನಾಡುತ್ತಾ ಸುತ್ತೂರು ಶ್ರೀಕ್ಷೇತ್ರಕ್ಕೆ ಕಾಲಿಟ್ಟರೆ, ನನಗೆ ಕೈಲಾಸದಲ್ಲಿದ್ದೇನೆ ಎಂಬ ಅನುಭವವಾಗುತ್ತದೆ. ಸ್ವರ್ಗವನ್ನ ಕಾಣುವುದಾದರೆ ಅದು ಸುತ್ತೂರಿನಲ್ಲಿ ಮಾತ್ರ. ಇದಕ್ಕೆ ನಿದರ್ಶನವೆಂಬಂತೆ "ಸರ್ವರಿಗೂ ಸಮಪಾಲು ಸರ್ವರಿಗೂ ಸಮಬಾಳು" ಎಂಬ ತತ್ವದಡಿಯಲ್ಲಿ ಜಾತಿ, ಮತ, ಧರ್ಮವನ್ನು ಎಣಿಸದೆ ಎಲ್ಲರೂ ಒಂದೇ ಎಂಬ ಭಾವನೆಯಂತೆ ಪೊರೆಯುವ ಶ್ರೀಗಳ ವ್ಯಕ್ತಿತ್ವ ಸಮಾಜಕ್ಕೆ ಮಾದರಿಯಾಗಿದೆ. ಪ್ರತಿ ವರ್ಷದ ಜಾತ್ರೆಗೆ ಆಗಮಿಸಿ ಶ್ರೀಗಳ ಆಶೀರ್ವಾದವನ್ನು ಪಡೆದರೆ ನಮಗೆ ಸಮಾಜಿಕ ಕಾರ್ಯದಲ್ಲಿ ತೊಡಗಲು ಶಕ್ತಿ ಬರುತ್ತದೆ. ಈ ಕ್ಷೇತ್ರ ತಪೋಭೂಮಿಯಾಗಿರುವುದರಿಂದ ಇಲ್ಲಿ ಜರುಗುವ ಎಲ್ಲಾ ಕಾರ್ಯಕ್ರಮಗಳು ರಾಷ್ಟ್ರಕ್ಕೆ ಆದರ್ಶನೀಯ ಎಂದು ತಿಳಿಸಿದರು. – ಬಿ.ಮಾನಸ



ಅಖಾಡದಲ್ಲಿ ಮದಗಜಗಳಂತೆ ಕಾದಾಡಿ, ಧೂಳೆಬ್ಬಿಸಿದ ಜಟ್ಟಿಗಳು

# ಧರ್ಮ ಸಂದೇಶ ಸಾರುವ ಸುಂದರ ರಂಗೋಲಿ



ಲಕ್ಷ ದೀಪೋತ್ಸವದಲ್ಲಿ ರಚಿಸಿದ್ದ ವಿವಿಧ ಬಗೆಯ ರಂಗೋಲಿಗಳಲ್ಲಿ ವಿಶೇಷವಾಗಿ ಶಂಕು, ಚಕ್ರ, ಗಧೆ, ಧ್ವಜ, ಸ್ವಸ್ತಿಕ್ ಹಾಗೂ ಓಂಗಳಿಂದ ಕೂಡಿದ ರಂಗೋಲಿ ಜನಮನವನ್ನು ಆಕರ್ಷಿಸಿತು.

ಈ ರಂಗೋಲಿಯನ್ನು ನಾಲ್ಕು ಗಂಟೆಗಳಲ್ಲಿ ರಚಿಸಿ ಜನಮೆಚ್ಚುಗೆಗೆ ಪಾತ್ರರಾಗಿರುವ ಮೈಸೂರಿನ ಕುವೆಂಪುನಗರದ ನಿವಾಸಿಗಳಾದ ಶ್ರೀಮತಿ ಮೀನಾಕ್ಷಿಯವರು ಸುತ್ತೂರಿನ ಧಾರ್ಮಿಕ ಕಾರ್ಯಕ್ರಮಗಳಲ್ಲಿ ಭಾಗವಹಿಸಲು ಅವಕಾಶ ದೊರೆತಿರುವುದು ನನ್ನ ಪುಣ್ಯ, ಶ್ರೀಗಳ ಕೃಪೆ ನನ್ನ ಮೇಲಿರುವುದೇ ಇದಕ್ಕೆ ಕಾರಣ. ಉತ್ತರಭಾರತದಲ್ಲಿ ಪಸರಿಸಿರುವ ಈ ಸುಂದರ ರಂಗೋಲಿಯನ್ನು ದಕ್ಷಿಣಭಾರತಕ್ಕೆ ಪರಿಚಯಿಸುವುದು ನನ್ನ ಉದ್ದೇಶವಾಗಿದೆ. ಈ ರಂಗೋಲಿ ಜನರಿಗೆ ಶುಭಸಂದೇಶವನ್ನು ಸಾರುವ ಜೊತೆಗೆ ನೆಮ್ಮದಿ ಮತ್ತು ಸಂತೋಷವನ್ನು ಉಂಟುಮಾಡುತ್ತದೆ ಎಂದು ತಿಳಿಸಿದರು. –ವಿ. ಪ್ರಿಯದರ್ಶಿನಿ

# ಗ್ರಾಮೀಣ ನಾಟಕಗಳ ಒಂದು ನೋಟ

3 ಫೆಬ್ರವರಿ 2019ರ ರಾತ್ರಿ ಎಸ್. ಹೊಸಕೋಟೆ ಗ್ರಾಮದ ಶ್ರೀ ಕಪಿಲೇಶ್ವರ ರೈತ ಸ್ವ–ಸಹಾಯ ಸಂಘದವರು ಹಿರಿಯರ ಮನೆ ಆವರಣದಲ್ಲಿ ಅಭಿನಯಿಸಿದ 'ಭಕ್ತ ಪ್ರಹ್ಲಾದ' ಎಂಬ ನಾಟಕ ಪ್ರದರ್ಶನವನ್ನು ವಾಟಾಳು ಮಠದ ಷ.ಬ್ರ.ಶ್ರೀ ಡಾ. ಸಿದ್ಧಲಿಂಗ ಶಿವಾಚಾರ್ಯ ಮಹಾಸ್ವಾಮಿಗಳವರು ಉದ್ಘಾಟಿಸಿ ರಂಗಭೂಮಿ ಕಲಾಪ್ರದರ್ಶನ ಕಡಿಮೆಯಾಗುತ್ತಿರುವ ಈ ಸಂದರ್ಭದಲ್ಲಿ ಪರಮಪೂಜ್ಯರು ನಾಟಕ ಕಲೆಗಳನ್ನು ಪ್ರೋತ್ಸಾಹಿಸುವ ಸಲುವಾಗಿ ಜಾತ್ರಾ ಸಂದರ್ಭದಲ್ಲಿ ಸುಮಾರು 15 ನಾಟಕಗಳಿಗೆ ಅಭಿನಯಿಸಲು, ಕಲಾರಸಿಕರನ್ನು ಉತ್ತೇಜಿಸಲು ಅವಕಾಶ ಕಲ್ಪಿಸಿಕೊಟ್ಟಿರುತ್ತಾರೆ. ಈ ಬಾರಿ ಭಕ್ತಾದಿಗಳ ಜನಸಮೂಹವು ಹೆಚ್ಚಿನ ಸಂಖ್ಯೆಯಲ್ಲಿ ನಾಟಕಗಳನ್ನು ವೀಕ್ಷಿಸಿ, ಪ್ರೋತ್ಸಾಹಿಸುತ್ತಿದ್ದಾರೆ ಎಂದು ತಿಳಿಸಿದರು.

ಜೆಎಸ್‌ಎಸ್ ಮಹಾವಿದ್ಯಾಪೀಠದ ಕಾರ್ಯದರ್ಶಿಗಳು–2 ರವರಾದ ಶ್ರೀ ಶಿವಕುಮಾರಸ್ವಾಮಿಗಳು ಹಾಗೂ ನಂಜನಗೂಡಿನ ವಿಧಾನಸಭಾ ಕ್ಷೇತ್ರದ ಶಾಸಕರಾದ ಶ್ರೀ ಹರ್ಷವರ್ಧನರವರು ಈ ಕಾರ್ಯರ್ಕಮದಲ್ಲಿ ಭಾಗವಹಿಸಿದ್ದರು.

ಅದೇ ದಿನ ರಾತ್ರಿ ನಡೆದ 'ಶಿವಕುಮಾರ ಅಥವಾ ಶೂರಪದ್ಮನ ವಧೆ' ನಾಟಕವನ್ನು ಮೈಸೂರು ತಾಲ್ಲೂಕಿನ ಆಲನಹಳ್ಳಿಯ ಶ್ರೀ ಮಹಾಲಿಂಗೇಶ್ವರ ಕೃಪಾಪೋಷಿತ ನಾಟಕಮಂಡಳಿಯವರು ಶ್ರೀ ಸಿದ್ದನಂಜ ದೇಶಿಕೇಂದ್ರ ಮಂಗಳ ಮಂಟಪದ ಆವರಣದಲ್ಲಿ ಹಾಗೂ 'ದಕ್ಷಯಜ್ಞ ಅಥವಾ ಭೃಗುಮುನಿಯ ಗರ್ವಭಂಗ' ನಾಟಕವನ್ನು ಮೈಸೂರು ತಾಲ್ಲೂಕು, ಬೆಳವಾಡಿ ಗ್ರಾಮದ ಶ್ರೀ ಮನೆ ಮಂಚಮ್ಮ ಕೃಪಾಪೋಷಿತ ನಾಟಕ ಮಂಡಳಿಯವರು ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ಪಕ್ಕದ ಆವರಣದಲ್ಲಿ ಅಭಿನಯಿಸಿದರು.



4 ಫೆಬ್ರವರಿ 2019ರ ರಾತ್ರಿ ಮೈಸೂರು ಶ್ರೀ ಶಿವರಾತ್ರೀಶ್ವರ ಕಲಾಸಂಘದವರು ಶ್ರೀ ಸಿದ್ಧನಂಜ ದೇಶಿಕೇಂದ್ರ ಮಂಗಳಮಂಟಪದ ಆವರಣದಲ್ಲಿ 'ದಾನಶೂರ ಕರ್ಣ' ನಾಟಕ ಪ್ರದರ್ಶನ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದ ಚಿಕ್ಕತುಪ್ಪೂರು ಮಠದ ಶ್ರೀ ಚನ್ನವೀರಸ್ವಾಮಿಗಳು ತಮ್ಮ ಶುಭಸಂದೇಶದಲ್ಲಿ ನಾಟಕಗಳ ಕಲಿಕೆ ಮತ್ತು ಅಭಿನಯದಿಂದ ದುಶ್ಚಟಗಳು ದೂರವಾಗುತ್ತದೆ. ಹಳ್ಳಿ ಹಳ್ಳಿಗಳಲ್ಲಿರುವ ಬೇದಭಾವಗಳು ಮರೆಯಾಗುತ್ತವೆ. ಜನರು ಪರಸ್ಪರ ಹೊಂದಾಣಿಕೆಯಿಂದ ಸಹಬಾಳ್ವೆ ಮಾಡಲು ಸಹಕಾರಿಯಾಗುತ್ತದೆ. ಇಂತಹ ಕಲೆಗಳನ್ನು ಉಳಿಸಿ ಬೆಳೆಸಿ ಎಂದು ಕಲಾಭಿಮಾನಿಗಳಿಗೆ ಕರೆ ನೀಡಿದರು.

ಅದೇ ದಿನ ರಾತ್ರಿ ನಡೆದ 'ಮೋಹಿನಿ ಭಸ್ಮಾಸುರ' ನಾಟಕವನ್ನು ಸುತ್ತೂರಿನ ಶ್ರೀ ಶಿವರಾತ್ರೀಶ್ವರ ಕಲಾಸಂಘದವರು ಹಿರಿಯರ ಮನೆ ಆವರಣದಲ್ಲಿ, 'ದಕ್ಷಯಜ್ಞ' ನಾಟಕವನ್ನು ಟಿ.ನರಸೀಪುರ ತಾಲ್ಲೂಕು ಬಸವನಹಳ್ಳಿ ಗ್ರಾಮದ ಶ್ರೀ ಬಸವೇಶ್ವರ ಕಲಾಸಂಘದವರು ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ಪಕ್ಕದ ಆವರಣದಲ್ಲಿ ನಡೆಸಿಕೊಟ್ಟರು. – ಯು. ಸ್ವಾತಿ

## ಕಪಿಲೆಯ ಅಲೆಗಳ ಮೇಲೆ ತೆಪ್ಪೋತ್ಸವ



# ದೂರದರ್ಶಿತ್ವವುಳ್ಳ ಶ್ರೀಕ್ಷೇತ್ರ : ಶ್ರೀ ವಿ. ಸೋಮಣ್ಣ



**ಸಾಂಸ್ಕೃತಿಕ ಮೇಳ ಹಾಗೂ ದನಗಳ ಜಾತ್ರೆ ಸಮಾರೋಪ ಸಮಾರಂಭದಲ್ಲಿ ಮಾತನಾಡುತ್ತಿರುವ ಶ್ರೀ ವಿ. ಸೋಮಣ್ಣನವರು. ಚಿತ್ರದಲ್ಲಿ ಶ್ರೀ ಎಂ.ವೈ. ಪಾಟೀಲ್, ಶ್ರೀ ಗುರುಮಹಾಂತ ಮಹಾಸ್ವಾಮಿಗಳು, ಶ್ರೀ ವೆಂಕಟರಾವ್ ನಾಡಗೌಡ, ಡಾ. ಕೆ. ಅನ್ನದಾನಿ ಅವರುಗಳಿದ್ದಾರೆ**

ಸಾಂಸ್ಕೃತಿಕ ಮೇಳ ಹಾಗೂ ದನಗಳ ಜಾತ್ರೆ ಸಮಾರೋಪ ಸಮಾರಂಭದ ಅಧ್ಯಕ್ಷತೆ ವಹಿಸಿದ್ದ ಬೆಂಗಳೂರಿನ ವಿಧಾನಸಭಾ ಸದಸ್ಯರು ಹಾಗೂ ಮಾಜಿ ಸಚಿವರಾದ ಶ್ರೀ **ವಿ. ಸೋಮಣ್ಣನವರು** ಮಾತನಾಡಿ ಸುತ್ತೂರು ಶ್ರೀಕ್ಷೇತ್ರದ ಜಾತ್ರೆಯು ಬರಿ ಕಾರ್ಯಕ್ರಮಗಳಿಗೆ ಸೀಮಿತವಾಗಿರದೆ ಭಾರತೀಯ ಕಲೆ, ಸಂಸ್ಕೃತಿಗಳನ್ನು ಉಳಿಸಿ ಬೆಳೆಸುವಲ್ಲಿ ಪ್ರಮುಖ ಪಾತ್ರ ವಹಿಸುತ್ತಿದೆ, ಇದಕ್ಕೆಲ್ಲಾ ಪರಮ ಪೂಜ್ಯ ಶ್ರೀಗಳವರ ಮಾರ್ಗದರ್ಶನ ಅಮೋಘವಾದದ್ದು, ಶ್ರೀಗಳವರ ದೂರದೃಷ್ಟಿ ಚಿಂತನೆಗಳು ರೈತರ, ಸಾರ್ವಜನಿಕರ ಬೆಳವಣಿಗೆಗೆ ಪೂರಕವಾಗಿದೆ. ಶ್ರೀಮಠವು ಜಾತ್ಯತೀತವಾಗಿ ಅನ್ನದಾನ, ವಿದ್ಯಾದಾನವನ್ನು ನೀಡುತ್ತಿದೆ. ಪ್ರಗತಿಪರ ಚಿಂತನೆಗಳನ್ನು ಒಳಗೊಂಡು ಹಲವಾರು ಯೋಜನೆಗಳನ್ನು ರೂಪಿಸುತ್ತಿದೆ. ಸುತ್ತೂರು ಜಾತ್ರೆಯಲ್ಲಿ ಧಾರ್ಮಿಕ ಚಿಂತನೆಗಳು, ಕೃಷಿ ಮೇಳ, ದನಗಳ ಜಾತ್ರೆ, ವಸ್ತುಪ್ರದರ್ಶನ, ಉಚಿತ ಸಾಮೂಹಿಕ ವಿವಾಹ ಹಾಗೂ ಕುಸ್ತಿ ಪಂದ್ಯಾವಳಿ ಹೀಗೆ ಜನೋಪಕಾರಿ ಕಾರ್ಯಗಳನ್ನು ಕಾಣಬಹುದಾಗಿದೆ, ಅದಕ್ಕಾಗಿ ಪೂಜ್ಯಶ್ರೀಗಳವರಲ್ಲಿ ನನ್ನ ಭಕ್ತಿಪೂರ್ವಕ ಪ್ರಣಾಮಗಳನ್ನು ಅರ್ಪಿಸುತ್ತೇನೆ ಎಂದರು. -ಚೈತ್ರ ಎಂ



**ವಾಟಾಳ್ ಆನಂದ್**
**ಬಿ.ಎನ್. ನಿಜಲಿಂಗಪ್ಪ, ಜಯಶಂಕರ್**
**ಮಂಜುನಾಥ್, ಶಶಾಂಕ್**
**ನಂಜುಂಡನಾಯ್ಕ**

# ಶಾಂತಿ ನೆಮ್ಮದಿ ಸಂತೆಯ ಸರಕಲ್ಲ

## ಡಾ. ಶ್ರೀ ಮಲ್ಲಿಕಾರ್ಜುನ ಮುರುಘ ರಾಜೇಂದ್ರ ಮಹಾಸ್ವಾಮಿಗಳವರು



**ಭಜನಾ ಮೇಳ ಸಮಾರೋಪ ಸಮಾರಂಭದಲ್ಲಿ ಗಾವಡಗೆರೆ, ಜಡೆ ಮಠ ಹಾಗೂ ಆನಂದಪುರಂನ ಪೂಜ್ಯರುಗಳಿದ್ದಾರೆ**

ಶಾಂತಿ-ನೆಮ್ಮದಿಯನ್ನು ಹಣದಿಂದ ಕೊಂಡುಕೊಳ್ಳಲಾಗುವುದಿಲ್ಲ, ಅವು ಸಂತೆಯಲ್ಲಿ ಸಿಗುವಂತಹ ವಸ್ತುಗಳಲ್ಲ ಎಂದು ಆನಂದಪುರಂನ ಶ್ರೀ ಮುರುಘಾಮಠದ ಡಾ. ಶ್ರೀ ಮಲ್ಲಿಕಾರ್ಜುನ ಮುರುಘರಾಜೇಂದ್ರ ಮಹಾಸ್ವಾಮಿಗಳವರು ನುಡಿದರು.

ಭಜನಾಮೇಳ ಸಮಾರೋಪ ಸಮಾರಂಭದಲ್ಲಿ ಸಮ್ಮುಖ ವಹಿಸಿದ್ದ ಶ್ರೀಗಳು, ಮನುಷ್ಯನು ಹಣದ ಹಿಂದೆ ಬೆನ್ನತ್ತಿ ಹೋಗುತ್ತಿದ್ದಾನೆ. ನಾನೇ ಜ್ಞಾನಿ ಎಂಬ ಅಹಂಕಾರದಿಂದ ಮನುಷ್ಯ ಸ್ವಾರ್ಥ ಹಾಗೂ ಸಂಕುಚಿತ ಭಾವನೆಯನ್ನೊಳಗೊಂಡು ತನ್ನ ನೆಮ್ಮದಿಯನ್ನು ಕಳೆದುಕೊಳ್ಳುತ್ತಿದ್ದಾನೆ. ಮನಸ್ಸೆ ಎಲ್ಲದರ ಮೂಲ, ನಾವು ಮನಸ್ಸಿನ ಗುಲಾಮರಾಗಿದ್ದೇವೆ, ನಮ್ಮ ಮನಸ್ಸನ್ನು ನಿಯಂತ್ರಣದಲ್ಲಿಟ್ಟುಕೊಂಡು ನೆಮ್ಮದಿ ಕಾಣಬೇಕು. ಇದಕ್ಕಾಗಿ ಧ್ಯಾನ, ಭಜನೆ, ಪ್ರಾರ್ಥನೆಯನ್ನು ಮಾಡುವುದರ ಮೂಲಕ ಮನಸ್ಸನ್ನು ಹಿಡಿದಿಟ್ಟುಕೊಳ್ಳಬಹುದು ಇವುಗಳು ಮನಸ್ಸನ್ನು ಸರಿಯಾದ ಮಾರ್ಗಕ್ಕೆ ತರುವ ಸಾಧನಗಳಾಗಿವೆ. ಶ್ರೀಮಠವು ಇಂತಹ ಸತ್ಕಾರ್ಯಗಳನ್ನು ಹಮ್ಮಿಕೊಂಡು ಸಮಾಜಕ್ಕೆ ಬೇಕಾದ ಜನಪರ ಯೋಜನೆಗಳನ್ನು ನೀಡುತ್ತಿದೆ. ಇಂತಹ ಸಮಾಜಮುಖಿ ಕಾರ್ಯಗಳಿಂದ ಶ್ರೀಕ್ಷೇತ್ರವು ಮೇಲ್ಪಂಕ್ತಿಯಲ್ಲಿದೆ ಎಂದು ತಿಳಿಸಿದರು.

ಸಮ್ಮುಖ ವಹಿಸಿದ್ದ ಸೊರಬ ತಾಲ್ಲೂಕಿನ ಜಡೆ ಶ್ರೀ ಸಂಸ್ಥಾನ ಮಠದ ಪೀಠಾಧ್ಯಕ್ಷರಾದ ಯೋಗಾಚಾರ್ಯ **ನಿ.ಪ್ರ.ಸ್ವ. ಡಾ. ಶ್ರೀ ಮಹಾಂತ ಸ್ವಾಮಿಗಳವರು** ಭಕ್ತರು ಜಾತ್ರೆಯಲ್ಲಿ ಪಾಲ್ಗೊಂಡು ಭವ್ಯತೆಯನ್ನು ಕಾಣುವುದರ ಜೊತೆಗೆ ಶ್ರೀಗಳ ಕೃಪೆಗೆ ಪಾತ್ರರಾಗುತ್ತಿದ್ದಾರೆ. ಬಸವಣ್ಣನವರು ಎನ್ನ ಕಾಲೇ ಕಂಬ, ದೇಹವೇ ದೇಗುಲ, ಶಿರವೇ ಹೊನ್ನ ಕಳಸವಯ್ಯ ಎಂದು ಹೇಳಿದ್ದಾರೆ. ದೇಹ ಎಂಬ ರಥದಲ್ಲಿ ಆತ್ಮ ಎಂಬ ಚೈತನ್ಯ ವಸ್ತುವನ್ನು ನಾವೆಲ್ಲ ಸ್ಥಾಪಿಸಿಕೊಂಡಿದ್ದೇವೆ. ಶಿರದಲ್ಲಿ ಬಂಗಾರದಂತಹ ಒಳ್ಳೆಯ ವಿಚಾರಗಳನ್ನು ತುಂಬಿಕೊಳ್ಳಬೇಕು. ಜಾತ್ರೆ ಎಂಬುದು 'ಜಾ' ಎಂದರೆ ಹೋಗು 'ತ್ರಿ' ಎಂದರೆ ಮೂರು, ಮಾನವ ಮಲ, ಮಾಯ ಮಲ, ಮತ್ತು ಕಾರ್ಮಿಕ ಮಲಗಳನ್ನು ಬಿಟ್ಟು ಗುರುಲಿಂಗ ಜಂಗಮ ಪ್ರತೀಕವಾದಂತಹ ಜಾತ್ರೆಯಲ್ಲಿ ಪಾಲ್ಗೊಂಡು ಅಲ್ಲಿ ನಡೆಯುವ ಧಾರ್ಮಿಕ, ಆಧ್ಯಾತ್ಮಿಕ, ಸಾಮಾಜಿಕ ಚಟುವಟಿಕೆಗಳನ್ನು ಗಮನಿಸಿ ಮನುಷ್ಯನ ಬದುಕಿಗೆ ಅವಶ್ಯಕತೆ ಇರುವುದನ್ನು ಅಳವಡಿಸಿಕೊಂಡರೆ ಮನುಷ್ಯ ಆದರ್ಶ ವ್ಯಕ್ತಿಯಾಗುತ್ತಾನೆ. ಅಂತಹ ಕಾರ್ಯಗಳನ್ನು ಸುತ್ತೂರು ಶ್ರೀಕ್ಷೇತ್ರ ಮಾಡುತ್ತಿದೆ ಎಂದು ನುಡಿದರು.

ಸಮಾರಂಭದಲ್ಲಿ ಗಾವಡಗೆರೆಯ ಶ್ರೀ ಗುರುಲಿಂಗ ಜಂಗಮ ಮಠದ ಶ್ರೀ ನಟರಾಜ ಸ್ವಾಮಿಗಳವರು ಉಪಸ್ಥಿತರಿದ್ದರು. -ಎಂ. ಹರ್ಷಿತ, ಸುಮ. ಪಿ

## ಮೈ ನವಿರೇಳಿಸಿದ ಪೈಲ್ವಾನರು



Printed by : Academy Newspapers Private Limited (Publishers of Star of Mysore and Mysooru Mithra)
15-C, Industrial 'A' Layout, Bannimantap, Mysore - 570 015